ಅಪರಂಜಿ

ತಿಳಿನಗೆಯ ಕಾರಂಜಿ

ಬಿಡಿಪ್ರತಿ :
ಕೇವಲ ಒಂದು ರೂಪಾಯಿ



ಸಂಪುಟ–೨

ಸಂಚಿಕೆ–೩

ಡಿಸೆಂಬರ್–೮೪

ಅ ಪ ರ ಂ ಜಿ

ಗೌರವ ಸಲಹೆಗಾರರು ;
ಶ್ರೀ ಅ.ರಾ.ಸೇ
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ : ರೂ. 15-00

ಮ ನ ವಿ

ಇಂದಿನಿಂದ ಅಪರಂಜಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯ. ಬಿಡಿಪ್ರತಿಯ ಬೆಲೆ ಒಂದು ರೂಪಾಯಿ. ಇದಕ್ಕನುಗುಣವಾಗಿ ವಾರ್ಷಿಕ ಚಂದಾ ಶುಲ್ಕವನ್ನು (ಅಂಚೆ ವೆಚ್ಚಸೇರಿ) ಹದಿನೈದು ರೂ. ಗಳಿಗೆ ನಿಗದಿಸಿದ್ದೇವೆ. ಈಗಾಗಲೇ ಇಪ್ಪತ್ತೈದು ರೂ. ಚಂದಾಹಣ ನೀಡಿರುವವರಿಗೆ ಹದಿನೆಂಟು ಸಂಚಿಕೆಗಳನ್ನು ಕಳಿಹಿಸಲು ನಿರ್ಧರಿಸಿದ್ದೇವೆ.

ಚೆಕ್ಕುಗಳನ್ನು " ಅಪರಂಜಿ " ಹೆಸರಿಗೆ ಕಳುಹಿಸಬಹುದು.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು–560 003

ಶಿವಕುಮಾರ್
ಸಂಪಾದಕ

ಈ ಸಂಚಿಕೆಯಲ್ಲಿ........

ವ್ಯಂಗ್ಯ ಚಿತ್ರಗಳು—ಚಂದ್ರು ಮತ್ತು ರವಿರಾಜ ಹಾಲಂಬಿ

ಮುದ್ರಣ : ಇಂಪ್ರೆಷನ್ಸ್, 404, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3

ಸಂಪುಟ—೨ ಡಿಸೆಂಬರ್ ೮೪ ಸಂಚಿಕೆ—೩

ಅನಿತ್ಯವಾದ ಶರೀರದಲ್ಲಿ ನಿತ್ಯನಾದ, ಅಶರೀರನಾದ, ಮಹತ್ತಾದ, ಸರ್ವ ವ್ಯಾಪಿಯಾದ, ಆತ್ಮನನ್ನು ತಿಳಿದುಕೊಂಡ ಧೀರ ಶೋಕಿಸುವುದಿಲ್ಲ.

—ಕಠೋಪನಿಷತ್

ಅಪರಂಜಿ ಕಿಡಿ

—ಆನಂದ್

ರಾಷ್ಟ್ರದಲ್ಲೆಲ್ಲ ಕಣ್ಣೀರು ಹರಿಯುವಾಗ ಕಿಡಿ ಹೇಗೆ ಹಾರುತ್ತೀ ಅಂತ ಒಬ್ಬರು ಆಪ್ತರು ಬರೆದಿದ್ದಾರೆ.

* * * * *

'ಕರ್ಮ' ಎಂಬ ಹಿಂದೀ ಚಿತ್ರವನ್ನು ಚೈನಾದಲ್ಲಿ ತೋರಿಸುತ್ತಾರಂತೆ

—ಸುದ್ದಿ

ಪಾಪ, ಅವರ ಕರ್ಮ !

* * * * *

ಡಿಸೆಂಬರ್‌ನಲ್ಲಿ ಲೋಕಸಭಾ ಚುನಾವಣೆ

—ಸುದ್ದಿ

ಅದೆಷ್ಟು ಹಣ ಪೋಲಾಗುತ್ತದೋ !

* * * * *

ತುಳಸೀದಳದಲ್ಲಿ ಸಂತಾನ ಹರಣ ಶಕ್ತಿ ಇದೆಯಂತೆ

—ವಿಜ್ಞಾನಿಗಳ ಹೇಳಿಕೆ

ಇನ್ನು ಅಶ್ವತ್ಥ ಕಟ್ಟೆಯ ಸುತ್ತ ತುಳಸಿ ನೆಡಬೇಕು,

ಈಗ ಭಾರತಕ್ಕೆ ಪರರಾಷ್ಟ್ರಗಳೊಡನೆ ರಾಜೀ ಮಾಡಿಕೊಳ್ಳೋದು ಸುಲಭ ವೇನೋ ?

* * * * *

ಶ್ರೀ ವಾಲಿ ಎಂಬುವರನ್ನು ದೆಹಲಿಯ ಲೆಫ್ಟಿನೆಂಟ್ ಗೌರ್ನರ್ ಆಗಿ ನೇಮಿಸಿದ್ದಾರೆ.

—ಸುದ್ದಿ

ಅವರ ಸುಗ್ರೀವಾಜ್ಞೆಗಳಿಂದ ಪುನಃ ಶಾಂತಿ ನೆಲಸಲಿ !

* * * * *

ಶ್ರೀಮತಿ ಗಾಂಧಿಯವರ ಮರಣ "ಅಕಾಲಿಕ" ಎಂದು ಹೇಳಿದರೂ ಅಪಾರ್ಥ ವಾಗುತ್ತದೇನೋ ?


* * * * *

ಹಲವಾರು ಕಾಂಗ್ರೆ ಮುಖಂಡರಿಗೆ ನಾಮಪತ್ರಗಳ ಬದಲು ಅದರ ಪೂರ್ವಾರ್ಧ ಸಿಕ್ಕಿದೆಯಂತೆ

ಮುಂದಿ ಬಳಸಿದ ಸರಕು

ಹಳೆಯ ಮಂಚವ ಕೊಳುತ ಗೆಳೆಯ ಕೇಳಿದ ನನ್ನ
ಒಳಿತಲ್ಲವೇ ? ಬೆಲೆಯು ಆಯ್ತೆ ಅತಿಯು ?
"ಮುಂದಿ ಬಳಸಿದ ಸರಕು" ಎಂದ ಗೊಣಗಿದೆ ನಾನು
ನನ್ನ ದುರದುರಿಸಿದಳು ಅವನ ರತಿಯು

—ಎ. ಜಿ. ಭಟ್ಟ



'' ವೋಟೊಂದ್ಬಿಟ್ಟು ಬೇರೇ ಏನೂ ಕೇಳಕ್ಕಾಗಲ್ವೇನು ? ''

' ಸಹಾಯಧನ ವೃತ್ತಾಂತ '

(ಒಂದು ಅನೀತಿ ಕಥೆ) —ಬಿ. ಎಸ್. ಚಂದ್ರಶೇಖರ್

ಒಂದಾನೊಂದು ದೇಶದಲ್ಲಿ ಒಬ್ಬಾನೊಬ್ಬ ರಾಜ. ಎಲ್ಲಾ ರಾಜರುಗಳಂತೆ ಆ ರಾಜನಿಗೂ, ವಿರೋಧಿಗಳೊಂದಿಗೆ ಹೋರಾಡುವುದರಲ್ಲಿಯೇ ಹೆಚ್ಚಿನ ಸಮಯ ಕಳೆಯುತ್ತಿತ್ತು. ಜೊತೆಗೆ ಅವನು ರಾಜರುಗಳ ಸಂಘದ ಮುಂದಾಳು ಬೇರೆ. ಜೊತೆಯವರನ್ನು ಸತ್ಕರಿಸಲು ಅವರಿಂದ ಶಹಭಾಷ್‌ಗಿರಿ ಪಡೆಯಲು ಇನ್ನಷ್ಟು ವೇಳೆ ಬೇಕಾಗುತ್ತಿತ್ತು. ಜೊತೆಗೆ ಅವನಿಗೂ ಆಸ್ಥಾನ—ಅಲ್ಲಿ ಸಂಗೀತ, ಸಾಹಿತ್ಯ ವಿದ್ವಾಂಸರು. ಅಂತಃಪುರದಲ್ಲಿ ರಾಣಿಯರು—ಅವರ ಮರ್ಜಿಗಳು. ಇಷ್ಟೆಲ್ಲಾ ಕಾರ್ಯಭಾರ ಇದ್ದರೂ ಆ ರಾಜ ವರ್ಷದಲ್ಲಿ ಒಂದು ದಿನ, ಹೇಗಾದರೂ ಬಿಡುವು ಮಾಡಿಕೊಂಡು ಜನರ ಕಷ್ಟ ಕಾರ್ಪಣ್ಯಗಳನ್ನು ಖುದ್ದು ನೋಡಲು ಸಂಚಾರ ಹೋಗುತ್ತಿದ್ದ.

ಇಂತಹ ಒಂದು ದಿನ, ಗುಡಿಸಲ ಮುಂದೆ ಅಳುತ್ತಿರುವ ಮಗುವನ್ನು ರಾಜ ಕಂಡ. ಕರುಣಾ ಹೃದಯದ ಆಳುವ ಮಹಾಸ್ವಾಮಿ ತನ್ನ ವಾಹನವನ್ನು ಅಲ್ಲಿಯೇ ನಿಲ್ಲಿಸಿ ಮಗು ಅಳುವುದಕ್ಕೆ ಕಾರಣವೇನು ವಿಚಾರಿಸಿ ಎಂದು ತನ್ನ ಅನುಚರರಿಗೆ ಆಜ್ಞಾಪಿಸಿದ.

ಆ ಮಗು ಹೊಟ್ಟೆ ಹಸಿವಿನಿಂದ ಅಳುತ್ತಿದೆ ಎನ್ನುವ ಸಮಾಚಾರ ದೊರೆಗೆ ಆಶ್ಚರ್ಯವನ್ನುಂಟು ಮಾಡಿತು. ಆ ಮಗುವಿಗೆ ಏಕೆ ಹೊಟ್ಟೆ ತುಂಬಾ ತಿನ್ನಲು ಕೊಟ್ಟಿಲ್ಲ ಎಂದು ವಿಚಾರಿಸಲು ಮಗುವಿನ ತಂದೆಯನ್ನು ಕರೆಸಿದ.

ಮಗುವಿನ ತಂದೆ ಒಬ್ಬ ಕೆಲಸಗಾರ. ತಾನು ಕೆಲಸ ಮಾಡುವ ಹೊಲದ ರೈತ ತನಗೆ ಹೆಚ್ಚು ಕೂಲಿ ಕೊಡುತ್ತಿಲ್ಲ. ಅವನು ಸರಿಯಾದ ವೇತನ ಕೊಟ್ಟರೆ ತಾನು ಮಗುವಿನ ಹೊಟ್ಟೆ ತುಂಬಿಸಬಹುದು ಎಂದು ಕೆಲಸಗಾರ ಬಿನ್ನವಿಸಿಕೊಂಡ.

ರಾಜ ರೈತನನ್ನು ಕರೆಸಿದ. ಕೆಲಸಗಾರನಿಗೆ ಏಕೆ ಸರಿಯಾದ ವೇತನ ಕೊಡುತ್ತಿಲ್ಲವೆಂದು ಕೇಳಿದ. ರೈತ, ತನ್ನ ಬೆಳೆಯನ್ನು ಕೊಳ್ಳುವ ವರ್ತಕ, ಸರಿಯಾದ ಬೆಲೆ ಕೊಡುತ್ತಿಲ್ಲ. ಅವನು ನನ್ನ ಧಾನ್ಯವನ್ನು ಒಳ್ಳೆಯ ಬೆಲೆಗೆಕೊಂಡರೆ ನಾನು ಕೆಲಸಗಾರನಿಗೆ ಸರಿಯಾದ ವೇತನ ಕೊಡಬಹುದು ಎಂದು ವಿನಯದಿಂದ ವಿಜ್ಞಾಪಿಸಿಕೊಂಡ.

ಸರಿ. ವರ್ತಕನನ್ನು ಕರೆಸಲಾಯಿತು. ರೈತನ ಧಾನ್ಯಕ್ಕೆ ಏಕೆ ಸರಿಯಾದ ಬೆಲೆಯನ್ನು ನೀನು ಕೊಡುತ್ತಿಲ್ಲ ಎಂದು ರಾಜ ಅವನನ್ನು ಕೇಳಿದ.

'ಮಹಾಪ್ರಭು, ನಾನು ಅಧಿಕಾರಿಗಳಿಗೆ ಹೆಚ್ಚಿನ ತೆರಿಗೆ ತುಂಬಬೇಕು ತೆರಿಗೆ ಕಡಿಮೆಯಾದರೆ ರೈತನ ಧಾನ್ಯದ ಬೆಲೆ ಹೆಚ್ಚಿಸಬಹುದು' ಎಂದು ಉತ್ತರಿಸಿದ.

ರಾಜ ಅಧಿಕಾರಿಯನ್ನು ಕರೆಸಬೇಕಾಯಿತು. ಅಧಿಕಾರಿಯ ಉತ್ತರ ಸಿದ್ಧವಾಗಿತ್ತು: 'ಅನ್ನ ಕೊಡುವ ಧಣಿ, ವರ್ತಕನಿಂದ ಬರುವ ತೆರಿಗೆಯಿಂದಲೇ ನನ್ನ ಕಚೇರಿ ನಡೆಸಬೇಕು. ಕಚೇರಿ ಖರ್ಚಿಗೆ ತಕ್ಕಂತೆ ತೆರಿಗೆ ವಸೂಲು ಮಾಡುತ್ತಿದ್ದೇನೆ'

ರಾಜನಿಗೆ ಯಾವುದೇ ಸಮಸ್ಯೆಗೆ ಥಟ್ಟನೆ ಉತ್ತರಬೇಕು. ಯೋಚಿಸುವುದು ಅವನಿಗೆ ಕೊಂಚವೂ ಇಷ್ಟವಿಲ್ಲದ ವಿಷಯ. ಇಂದೂ ಬೇಗ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾಗಲೇ ಅವನಿಗೆ ತನ್ನ ನರ್ಸರಿಯ ಶಾಲೆಯ ಶಿಕ್ಷಕಿ ಹೇಳಿದ ಕತೆ ಜ್ಞಾಪಕಕ್ಕೆ ಬಂದಿತು. [ರಾಜನ ವಿದ್ಯಾಭ್ಯಾಸ ಅಲ್ಲಿಂದ ಹೆಚ್ಚು ಮೇಲೆ ಹೋಗಲಿಲ್ಲ ಎನ್ನುವುದು ಇಲ್ಲಿ ಅಪ್ರಕೃತ]

ಒಂದು ಇಲಿಯ ಬಾಲ ಬೆಕ್ಕು ಕಡಿದಿದೆ. ಹಸುವಿನಿಂದ ಹಾಲು ತಂದು ಕೊಟ್ಟರೆ ತಾನು ಬಾಲ ಹಿಂದೆ ಕೊಡುವುದಾಗಿ ಬೆಕ್ಕು ಇಲಿಗೆ ಹೇಳುತ್ತದೆ. ಹಸು ರೈತನಿಂದ ಹುಲ್ಲು ಕೊಡಿಸಿದರೆ ನಾನು ಹಾಲು ಕೊಡುತ್ತೇನೆ ಎನ್ನುತ್ತದೆ. ರೈತ ರೊಟ್ಟಿ ಅಂಗಡಿಯಿಂದ ರೊಟ್ಟಿ ತಂದುಕೊಟ್ಟರೆ ಹುಲ್ಲು ಕೊಡಲು ಸಿದ್ಧ. ಪಾಪದ ಇಲಿಗೆ ರೊಟ್ಟಿ ಅಂಗಡಿಯವನು ರೊಟ್ಟಿ ಕೊಡುತ್ತಾನೆ. ರೊಟ್ಟಿ ತಿಂದ ರೈತ ಹುಲ್ಲು ಕೊಡುತ್ತಾನೆ. ಹುಲ್ಲು ಸಿಕ್ಕಿದ ಹಸು ಹಾಲು ಕೊಡುತ್ತದೆ. ಹಾಲು ನೋಡಿ ಬೆಕ್ಕು ಇಲಿಬಾಲ ಹಿಂದೆ ಕೊಡುತ್ತದೆ. ಎಲ್ಲರ ಸಂತೋಷದಲ್ಲಿ ಕತೆ ಮುಗಿಯುತ್ತದೆ.

ರಾಜನಿಗೆ ಅಳುವ ಮಗುವಿನ ಸಮಸ್ಯೆಗೆ ಉತ್ತರ ಸಿಕ್ಕಿತು. ಅಧಿಕಾರಿಗೆ ಸಹಾಯಧನ ಕೊಟ್ಟರೆ ಅವನು ವರ್ತಕನ ಮೇಲಿನ ತೆರಿಗೆ ಕಡಿಮೆ ಮಾಡುತ್ತಾನೆ. ವರ್ತಕ ರೈತನಿಗೆ ಹೆಚ್ಚು ಬೆಲೆ ಕೊಡುತ್ತಾನೆ. ರೈತ ಕೂಲಿ ಏರಿಸುತ್ತಾನೆ. ಕೆಲಸಗಾರ ಮಗುವಿಗೆ ಹೊಟ್ಟೆತುಂಬಾ ಊಟ ಹಾಕುತ್ತಾನೆ. ರಾಜ ಅಧಿಕಾರಿಗೆ ದೊಡ್ಡ ಮೊತ್ತದ ಸಹಾಯಧನವನ್ನು ಆಜ್ಞಾಪಿಸಿದ. ಯುದ್ಧ, ಸಮಾಲೋಚನ ಸಂಗೀತ, ವಿಲಾಸಗಳ ತನ್ನ ಮಾಮೂಲಿ ಪ್ರಪಂಚಕ್ಕೆ ಹಿಂತಿರುಗಿದ.

ಒಂದು ವರ್ಷ ಉರುಳಿತು. ಮತ್ತೆ ಜನರ ಕಷ್ಟ ಸುಖಗಳನ್ನು ಅರಿಯಲು ಮೊಸಲಾದ ಆದಿನ ಬಂತು. ಪ್ರವಾಸ ಹೊರಟ ರಾಜನಿಗೆ ಮತ್ತೆ ಅದೇ ಮನೆಯ

ಮುಂದೆ ಅದೇ ಮಗು ಅಳುತ್ತಿರುವುದು ಕಾಣಿಸಿತು. ರಾಜ ಮತ್ತೆ ವಿಚಾರಣೆಗೆ ತೊಡಗಿದ. ಕೆಲಸಗಾರ, ರೈತ ವರ್ತಕರಿಂದ ಒಂದೆ ಬಂದ ಉತ್ತರಗಳೆ.

ಅಧಿಕಾರಿಯನ್ನು ನೋಡಲು ಹೋದಾಗ ಅವನ ಖುರ್ಚಿ ಇನ್ನೂ ಎತ್ತರ ವಾಗಿತ್ತು. ಫಳ ಫಳ ಹೊಳೆಯುತ್ತಿತ್ತು. ಅದರ ಮೇಲೆ ಒಳ್ಳೊಳ್ಳೆಯ ಮೆತ್ತೆ ಗಳು. ಸಹಾಯಧನದ ಫಲ ಅಧಿಕಾರಿಯವರ ಮುಂದೆ ಹೋಗಿಲ್ಲ ಎನ್ನುವುದು ನಿಶ್ಚಯವಾಗಿ ಗೊತ್ತಾಯಿತು.

ಈಗ ರಾಜ ವರ್ತಕನಿಗೇ ನೇರವಾಗಿ ಸಹಾಯಧನ ಕೊಡಿ ಎಂದು ಆಜ್ಞಾಪಿಸಿದ. ವರ್ತಕ, ರೈತ, ಕೆಲಸಗಾರ ಚಕ್ರದಲ್ಲಿ ಹರಿದುಬಂದ ಪ್ರತಿಫಲ ಮಗುವಿಗೆ ತಲಪುತ್ತದೆ ಎಂದು ಭಾವಿಸಿದ.

ಇನ್ನೊಂದು ವರ್ಷವಾಯಿತು. ಯಥಾಪ್ರಕಾರ ಮಗು ಅಳುತ್ತಿದೆ. ಮತ್ತೆ ವಿಚಾರಣೆ. ಈಗ ವರ್ತಕ ಮುಂಚೆ ಇದ್ದ ಒಂದೊಂದು ಬೆರಳಿನಲ್ಲಿ ಒಂದೊಂದು ಉಂಗುರದ ಬದಲು, ಒಂದೊಂದು ಬೆರಳಿನಲ್ಲೂ ಎರಡೆರಡು ಉಂಗುರ ಧರಿಸಿದ್ದಾನೆ. ಬೇರೆಯದೆಲ್ಲಾ ಹಿಂದಿನಂತೆಯೆ.

ರಾಜನಿಗೆ ನಿರಾಶೆಯಾದರೂ ಅದನ್ನು ತೋರಿಸಿಕೊಳ್ಳದೆ ಇನ್ನುಮುಂದೆ ರೈತನಿಗೆ ಸಹಾಯಧನ ಕೊಡಿ ಎಂದು ಆಜ್ಞಾಪಿಸಿ ತನ್ನ ಮಾಮೂಲೀ ಕಾರ್ಯಕಕ್ಕೆ ಹಿಂದಿರುಗಿದ.

ಇನ್ನೊಂದು ವರ್ಷಕಳೆಯಿತು, ಮಗು ಅಳುತ್ತಲೆ ಇದೆ. ಈಗ ರೈತ ಎತ್ತಿನ ನೇಗಿಲ ಬದಲು ಟ್ರಾಕ್ಟರ್ ಕೊಂಡಿದ್ದಾನೆ. ಇನ್ನೂ ಮುಂದೆ ಕೆಲಸಗಾರನಿಗೇ ನೇರವಾಗಿ ಸಹಾಯಧನ ಕೊಡಿ ಎಂದು ಆಜ್ಞಾಪಿಸಿ ಹೋದ ರಾಜ ಮತ್ತೆ ಆಕಡೆ ಬರಲಿಲ್ಲ.

ಮುಂದಿನ ವರ್ಷ ಏನಾದರೂ ಅವನು ಅಲ್ಲಿಗೆ ಬಂದಿದ್ದರೆ ಅದೇ ಅಳುವ ಮಗುವನ್ನು ನೋಡಬಹುದಾಗಿತ್ತು. ಜೊತೆಗೆ ಆ ಗ್ರಾಮದಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಸಾರಾಯಿ ಗೃಹವನ್ನೂ ನೊಡಬಹುದಾಗಿತ್ತು.

ರಾಜಕೀಯ ಗಾದೆಗಳು

—ವೆಂ. ವೆಂಕಟಸುಬ್ಬಯ್ಯ

೧ ಅಂಗೈಯಲ್ಲಿ ಮಂತ್ರೀನ ಇಟ್ಕೊಂಡು ಟ್ರಾನ್ಸ್‌ಫರ್‌ಗೆ ಅಲೆದ್ರಂತೆ.

೨ ಜಮಖಾನ ಹಾಸೋ ಭಾಷಣಕ್ಕೆ ಅಂದ್ರೆ, ಸಭೆ ಎಷ್ಟೊತ್ತು ನಡೆಯುತ್ತೆ ಅಂತ ಕೇಳಿದನಂತೆ.

೩. ದುರ್ಭಿಕ್ಷದಲ್ಲಿ ಮರು ಚುನಾವಣೆ.

೪ ದೂರದ ಮುಖ್ಯಮಂತ್ರಿ ಪದವಿ ಕಣ್ಣಿಗೆ ನುಣ್ಣಗೆ.

೫ ನಾಲ್ಕಾಣೆ ಸದಸ್ಯನಾಗೋ ಅಂದ್ರೆ, ಪಕ್ಷದ ಅಧ್ಯಕ್ಷ ಪದವಿ ನಂದೇನೆ ಅಂದ್ನಂತೆ.

೬ ಪುಡಾರಿಯ ದ್ವೇಷ ಸತ್ತಮೇಲೆ ಹನ್ನೆರಡುವರ್ಷ.

೭ ಪುಣ್ಯವಂತ ಚುನಾವಣೆಗೆ ನಿಂತು ಠೇವಣಿ ಕಳಕೊಂಡ.

೮ ಬೆಳೆಯುವ ಪೈರು ಗ್ರಾಮಪಂಚಾಯಿತಿಯಲ್ಲೇ ನೋಡು.

೯ ಮಾಡೋದು ರಾಜಕೀಯ ಮನೆಮುಂದೆ ಬೃಂದಾವನ.

೧೦ ಠೇವಣಿ ಕಳಕೊಂಡ್ರೂ ಜಬರದಸ್ತು ಬಿಡಲೊಲ್ಲ.

೧೧ ಮಂತ್ರಿ ತಿರುಗಿ ಕೆಟ್ಟ, ವಿರೋಧ ಪಕ್ಷದೋನು ಕೂತುಕೆಟ್ಟ.

೧೨ ಶಾಸಕನಾದೋನು ಜನಸೇವೆ ಮಾಡ್ತಾನಾ ?

೧೩ ವೇದಸಟೆಯಲ್ಲ, (ಚುನಾವಣಾ) ಪ್ರಣಾಳಿಕೆ ದಿಟವಲ್ಲ.

ಕೊನೆಯ ಗಿರಾಕಿ

—ಜಿ. ಎಸ್. ಜಿ.

ತಾಯಮ್ಮನ ಏಕತಾರ ಹೋಟಲ್ ನಮ್ಮೂರಿನಲ್ಲಿ ಬಹಳ ಹೆಸರುವಾಸಿ. ಅವಳ ಮಗಳು ಮಂಗಳಿಯೇ ಏಕತಾರೆ.

ತಾಯಮ್ಮ-ಕರಿದು ಹಾಕುತ್ತಿರುವ ಬೋಂಡಾನ ಮಂಗಳಿ ವಯ್ಯಾರದಿಂದ -ಗಿರಾಕಿಗಳಿಗೆ ಕೊಡುತ್ತಾ-ಇದ್ದರೆ-ಬೋಂಡಾ ನುಂಗುತ್ತಿರುವ ಗಿರಾಕಿಗೆ ಜೇಬುಖಾಲಿ ಯಾದ ಮೇಲೇ ಗೊತ್ತಾಗುತ್ತಾ ಇದ್ದದ್ದು-"ಮಂಗಳೀ ಮುಂದೆ ಮೆಣಸಿನಕಾಯಿ ಬೋಂಡಾತಿಂದು ಕಣ್ಣು ಮೂಗಿನಲ್ಲಿ ನೀರು ಸುರಿಸುತ್ತಾ"-ತಾನು ಮಂಗನಾದೆ ಎಂಬುದು.

"ಅಂಗಡೀ ಮನೆ" ಮುಂದೆ-ಮೂರು ಕಲ್ಲಿನ ಒಲೆ-ಮೇಲೆ-ಕಬ್ಬಿಣದ ಬಾಂಡಲಿಯಲ್ಲಿ ಕುದಿಯುವ ಎಣ್ಣೆ-ಕಪ್ಪುಗಟ್ಟಿದ ಅಲ್ಯೂಮಿನಿಯಂ ಡಬರಿಯಲ್ಲಿ ಕಲೆಸಿದ ಕಡಲೇಹಿಟ್ಟು-ಪಕ್ಕದಲ್ಲಿ ಒಂದು ಅಂಥದೇ ಪಾತ್ರೆಯಲ್ಲಿ ಮಸಾಲೆಹಾಕಿದ ಮೆಣಸಿನಕಾಯಿ ಒಲೆಮುಂದೆ-ಮೊಣಕೈವರೆಗೆ ಹಿಟ್ಟುಮಾಡಿಕೊಂಡು-ಬೆವರು ಸುರಿಸುತಾ-ಬೋಂಡಾ ಕರಿಯುತಾ-ಕುಕ್ಕರಕಾಲಿನಲ್ಲಿ ಕುಳಿತ ತಾಯಮ್ಮ-ಪಕ್ಕದಲ್ಲಿ ಒಂದು ಬೆಂಚು-ಅದರ ಮೇಲೆ ಗಿರಾಕಿಗಳು-ಮಧ್ಯದಲ್ಲಿ-ಸಿಂಗಾರ ಮಾಡಿಕೊಂಡು -ಬಳುಕುತ್ತಾ-ಬೋಂಡಾಕೊಡುತ್ತಾ-ಒಂದಕ್ಕೆ ಇಪ್ಪತ್ತೈದು ಪೈಸೆಯಂತೆ ಕಾಸು ಕಸಿಯುತ್ತಾ ನಿಂತ ಮಂಗಳಿ-ಇದು ನಿತ್ಯ ದೃಶ್ಯ.

ಅಂದು-ಸುಮಾರು ಒಂಬತ್ತೂವರೆ ಆಗಿತ್ತು. ಇನ್ನೇನು ಅಂಗಡಿ ಮುಚ್ಚಬೇಕು ಆಗ ಒಂದು ಗಿರಾಕಿ-ದಿನದ ಗಿರಾಕಿ ಅಲ್ಲ !—ನೀಟಾಗಿದಾನೆ-ಸೊಗಸಾದ ಬಟ್ಟೆ ಹಾಕಿರೊ-ಠಾಕು-ಠೀಕಿನ ಸೊಗಸುಗಾರ ಪುಟ್ಸಾಮಿ ! ತಾಯಿ ಮಗಳು ಮುಖ ಮುಖ ನೋಡಿಕೊಂಡರು ಯಾವುದು ಇದು? ದಾರಿತಪ್ಪಿದ ಮಿಕ?—ಅಪರೂಪದ ಗಿರಾಕಿ?

"ಬೋಂಡಾ ಕೊಡಿ"

ಎರಡೇ ಅವೆ-ಸೀದು ಹೋಗಿರೋ ಸೀಕಲು ಬೋಂಡಾ ಮಾತ್ರಗವೆ"

"ಅವೇ ಸಾಕು"

"ಇಪ್ಪತ್ತೈದು ಪೈಸಾ"

ಕೊಟ್ಟ-ಬೋಂಡಾ ಕಟ್ಟಿಸಿಕೊಡ-ತಿರುಗಿ ನೋಡದೇ ದಾರಿಬಿಟ್ಟ-ಬೋಂಡ ತಿನ್ನಲೇ ಇಲ್ಲ !

"ಯವ್ವಾ ಗಿರಾಕಿ-ಬೊಂಡಾತಿನ್ನಿಲ್ಲ?!"

"ನಿನ್ನೂ ನೋಡ್ಲಿಲ್ಲ?!

"ಯಾವ್ದೋ ಒಸಮುಕ"

* * * * *

ಈ ಗಿರಾಕಿ-ನಿತ್ಯ ಅಂಗಡಿ ಮುಚ್ಚೋವೇಳೆ ಬರವುದು-ಎರಡು ಸೀಕಲು ಬೋಂಡಾ ತೆಗೆದು ಕೊಳ್ಳುವುದು-ತಿರುಗಿ ಕೂಡಾನೋಡದೇ ಹೊಗುವುದು ನಿತ್ಯ ಇದೇ ಕೊನೆಯ ಗಿರಾಕಿ-ಗಿರಾಕಿಯ ಮೇಲೆ ಒಂದು ರೀತಿಯ ಅಂತಃಕಿರಣವೂ ಮೂಡಿತ್ತು.

ಒಂದು ದಿನ ತಾಯಮ್ಮ ಮಗಳನ್ನು "ಸೀಕಲು ಬೋಂಡಾದ ಗಿರಾಕಿ ಬರಲೇ ಇಲ್ಲಲ್ಲೆ?" ಎಂದು ಕೇಳಿದಳು

"ಯಾಕೋ ಅವ್ವ !"

"ನನ್ನೇನು ಕೇಳ್ತಿ?-ನಾನೇನು-ಅವನ್ನ ಕಟ್ಗತೀನ?"

"ಪಾಡಾಗದನೆ-ಅಲ್ಲ?!"

"ಉಂ-ಅಂಗದನೆ-ಎಂಗಿದ್ರೆ ನಂಗೇನುಬಿಡು ಕದಾ ಆಕು-ಒತ್ತಾಕತೆ"

* * * * *

ಮಾರನೇದಿನ ಯಥಾ ಪ್ರಕಾರ ಒಂಬತ್ತೂವರೆಗೆ ಗಿರಾಕಿ ಹಾಜರು.

ತಾಯಮ್ಮ ಮೇಲೆದ್ದು-ಕೈ ಒರೆಸಿ ಕೊಳ್ಳುತ್ತಾ-

"ಕುಂತ್ಗಾ-ತಮಾ-ಅಂಗ್ಯಾಕಾಡ್ತಿ-ಯಂಲ್ಡುದಿನ ಎಲ್ಲೋಗಿದ್ದೆ?"

"ಬೇರೆಕಡೆ-ಬೋಂಡಾ ತಗಂಡಿದ್ದೆ-ಉಪಯೋಗ ಆಗಲಿಲ್ಲ"

"ನಮ್ಮ ಅಂಗಡಿ ಬಿಟ್ರೆ-ಇನ್ಯಾವನು ಇಂಗ್ಮಾಡ್ತಾನೆ?—ನೀನು ಸೀಕಲು ಬೋಂಡಾ-ಮೆತ್ತಗಾದವು ಒಯ್ತಿ. ಇನ್ಮೇಲೆ ಎ೦ಟು ಗ೦ಟೆಗೆ ಬಾ-ಬಿಸೀವು –ಗರಿಗರಿ ಕೆಂಪನೆ ಬೋಂಡಾಸಿಗ್ತಾವೆ. ಎಂಗಿರ್ತಾವೆ ನೋಡು-ಮಂಗಳೀ ಕೈನಾಗೆ ಬೋಂಡಾ ಇಸ್ಕೊಂಡು ತಿಂತಾ ಇದ್ರೆ-ಎಂಗಿರ್ತದೆ ಆಹಹಾ-ತಮಾ ನಿನ್ನೆಸ್ರೇನು?"

"ಬಸವರಾಜ"

"ಅಂಗಾರೆ-ನಮ್ಮ ನಾನೇ-ಕುಂತ್ರಾ-ಒಳೀಕೆ ಬಾ ಪೆಸಲ್ ಬೋಂಡಾ ಕರೆದು ಹಾಕ್ತಿನೀ ಮಂಗಳೀ ಚಾ-ಮಾಡೇಳೇ"

ತಾಯಮ್ಮ ಸಂಭ್ರಮದಿಂದ ಒಟ್ಟು ಕರಸಿಮಣಸಿನಕಾಯಿಗೆ- ಸ್ಪೆಶಲ್ ಮಸಾಲೆ ಹಾಕಿ ಗರಿಗರಿಯಾಗಿ-ಬಿಸಿ-ಬಿಸಿ ಬೋಂಡಾಕರಿದು ತೆಗೆದು—

"ಮಂಗಲೀ ಆಯಪ್ಪನಿಗೆ–ಬೋಂಡಾಕೊಡು ನೀರು ಕೊಡು-ತಗಾ"

"ನಂಗೇನೂ ಬೇಡಾ-ಕಟ್ಟಿಕೊಡವ್ವಾ ಸಾಕು"

ಗಿರಾಕಿಗೆ ಬೇಸರ ತಾಯಮ್ಮನಿಗೆ ಸಡಗರ-ಮಂಗಳಿಗೆ-ಒಂದು ರೀತಿಯ, ಸಂಭ್ರಮದ ಮುಜುಗರ-ಗಿರಾಕಿ ಆತುರಮಾಡಿದ ಮೇಲೆ-ನಾಲ್ಕು ಬೋಂಡಾ ಕೆಂಪನೆಯ-ಗರಿಗರಿಯ ಸ್ಪೆಶಲ್ ಬೋಂಡಾ-ಕಟ್ಟಿ-ಮಂಗಳಿ ಕೈಲಿ ಕೊಡಿಸಿದಳು ತಾಯಮ್ಮ. ಗಿರಾಕಿ ಒಂದುರೂಪಾಯಿ ಕೊಟ್ಟು-ತಿರುಗಿ ನೋಡದೇ ಹೊರಟಾಗ ರೂಪಾಯಿಯನ್ನು ಕೈಯಲ್ಲೇ ಹಿಡಿದ ತಾಯಮ್ಮ

"ರೊಕ್ಕಾ ಬ್ಯಾಡತಮ್ಮಾ-ಇವತ್ತು ತಿಂದುನೋಡು ನಿಂಗೇ ಅಂತ-ಪೆಶಲ್ ಮಾಡಿಕೊಟ್ಟದನಿ ನಾಳೆ ಬಾ"

ಗಿರಾಕಿ ಆಗಲೇ ಕತ್ತಲಲ್ಲಿ ಮಾಯವಾಗಿದ್ದ

* * * * *

ಮಾರನೇ ದಿನ ಯಥಾಪ್ರಕಾರ ಗಿರಾಕಿ ಹಾಜರು. ತಾಯಮ್ಮ ಲಗುಬಗೆಯಿಂದ ಎದ್ದು

''ಒಳೀಕೆ ಬಾ ತಮಾ-ಮಾತಾಡೋದು ಐತಿ–ಬಾ-ಕುಂತ್ರಾ-ಎಂಗಿತ್ತು? ಬೋಂಡಾ"

ಮಂಗಳಿ ದಿನಕ್ಕಿಂತ ಹೆಚ್ಚು ಸಿಂಗರಿಸಿಕೊಂಡು ಹೂ ಮಾಡಿದು ವಯ್ಯಾರ ಮಾಡುತ್ತಿದ್ದಳು.

"ಏನವ್ವಾ? ನಾ–ಸೀಕಲು ಬೋಂಡ ಕೇಳಿದರೆ ಸುಡುಗಾಡು ಬಿಸಿಬಿಸಿ ಕೆಂಪನೆವೂ ಅಂತಾ ಕೊಟ್ಟೆ–ಚೆನ್ನಾಗಿರಲಿಲ್ಲ ಬಿಡು ರೂಪಾಯೀನೂದಂಡ"

"ಅದ್ಯಾಕ–ತಮ್ಮಾ–ಅಂಗಂತೀ–?''

"ನಾನ್ಯಾಕವ್ವಾತಿನ್ಲೀ-ಆ ನಿನ್ನ ಗರಿಗರಿ ಬೋಂಡಾ ಇಲಿಗೊ ಬ್ಯಾಡಾ. ಸೀಕಲು ಬೋಂಡಾಕ್ಕೆ ದಿನಾ ಎರಡು ಮೂರು ಬೀಳ್ತಿದ್ವು. ನಿನ್ನೆ ಒಂದಾರೂ ಬೀಳಿಲ್ಲ" ಎಂದ.

○

ನಗುವು ಸಹಜ ಧರ್ಮ

—ಲೀಲಾ ಮಿರ್ಜಿ

"ದುಡ್ಡು ಕೊಟ್ಟು ದೆವ್ವ ಹಿಡಿಸಿಕೊಂಡರು" ಅಂತ ಇದಕ್ಕೆ ಅನ್ನೋದು. ಬೆಳಗಾಗೆದ್ದು ಪೇಪರ್ ಓದಿದರೆ, ಅದರಲ್ಲಿರುವುದೆಲ್ಲಾ ಬರೀ ಸಾವು ಕೇಡುಗಳ ಸಂಖ್ಯೆಯೇ, ಲಾರಿ ಅಪಘಾತ–ಇಬ್ಬರ ಸಾವು, ಕೋಮುವಾರು ಗಲಭೆ ಅದೆಷ್ಟೋ ಜನ ನೆಗೆದುಬಿದ್ದರು. ಗಂಡ ತನ್ನ ಹೆಂಡತಿ ಮಕ್ಕಳನ್ನು ಇರಿದು ತಾನೂ ಪ್ರಾಣ ಬಿಟ್ಟ ಇತ್ಯಾದಿ ಇತ್ಯಾದಿ....

ಬೆಳಗಾಗೆದ್ದು ಒಂದೇ ರಾಗದಲ್ಲಿ ಯಾಕ್ ಅಳಬೇಕೊ ನಾ ಕಾಣೆ, ಹುಟ್ಟಿಸಿದ ದೇವರು ಹುಲ್ಲು ಮೇಯಿಸಿದರೂ, ಆ ಹುಲ್ಲನ್ನು ನಗುತ್ತಾ ಮೇಯಬಾರದೇಕೆ ? ಕಣ್ಣು ಬಿಟ್ಟು ನೋಡಿದರೆ ನಗಲು ನೂರೆಂಟು ವಸ್ತು/ವಿಷಯಗಳನ್ನು ಒದಗಿಸಿದ್ದಾನೆ ಭಗವಂತ.

ನಮ್ಮ ರಾಜಕಾರಣಿಗಳನ್ನಂತೂ ಜನರ ಮನರಂಜನೆಗೇ ದೇವರು ಸೃಷ್ಟಿಸಿದ್ದಾನೆಂದು ಕೆಲವರ ಮತ. ಆ ಮಹಾಮಹಿಮರಿಗೆ ಮುಕ್ತಿ ಸದ್ಯದಲ್ಲೇ ಪ್ರಾಪ್ತವಾಗುವುದೆನ್ನುವುದರಲ್ಲಿ ಸಂಶಯವೇ ಇಲ್ಲ. ಏಕೆಂದರೆ ಅವರಿಗೆ 'ನಾನು' ಎಂಬ ಸ್ವಾಭಿಮಾನವೇ ಇಲ್ಲ. ಜನ ಏನಾದರೂ ಅನ್ನಲಿ, ತಮ್ಮ ನಡೆ ನುಡಿಗಳಿಂದ ಜನರನ್ನು ನಗಿಸಿ, ಜನೋಪಕಾರವನ್ನು ಮಾಡುವುದೇ ಅವರ ಧ್ಯೇಯ !

ಯಾವುದೋ ಕಲಾ ಸಮ್ಮೇಳನ, ರಾಜಕಾರಣಿಗಳೊಬ್ಬರ ಭಾಷಣ ಹೀಗೆ ಮುಂದುವರಿದಿತ್ತು. "culture is the key word of our country, we have many cultures like horticulture, sericulture, Agriculture etc.........." ಎಂದು ಹೇಳಿ ಎಲ್ಲರನ್ನೂ ನಗಿಸಿದರಂತೆ. ಎಲ್ಲರೂ ನಕ್ಕಿದ್ದನ್ನು ನೋಡಿ ತಾವೂ ನಕ್ಕರಂತೆ !

ಈ ಮಹಾಪುರುಷರ ಮಾತುಗಳನ್ನು ಕೇಳಿದರೆ ಯಾವ ಕಷ್ಟವಿದ್ದರೂ ಮರೆತು ಹೋಗುತ್ತೆ. ಈ ಕಾರಣದಿಂದ ನಮ್ಮನ್ನಾಳುವವರ ಭಾಷಣ ಎಲ್ಲಿದ್ರೂ, ನಾನು ತಪ್ಪದೇ ಹೋಗಿ ಕೇಳುವುದು ರೂಢಿ.

ಇನ್ನೊಮ್ಮೆ ಬಾಪೂ ಮೈದಾನದಲ್ಲಿ ನಡೆದ ಭಾಷಣವಂತೂ ಮರೆಯುವ ಹಾಗೆ ಇಲ್ಲ ! ಈ ರಾಜಕಾರಣಿ ಮಾಡುತ್ತಿದ್ದ ಭಾಷಣದ ವಿಷಯ ಯಾವುದೆಂದು ನಿಖರವಾಗಿ ಹೇಳುವಹಾಗಿರಲಿಲ್ಲ. ನಮ್ಮ ದೇಶ, ಕೋಳಿ ಸಾಕಾಣಿಕೆ, ವಿಜ್ಞಾನ, ಕಳ್ಳಕಾಕರು ಇತ್ಯಾದಿಯಾಗಿ ಎಲ್ಲಾ ವಿಷಯಗಳನ್ನೊಳಗೊಂಡ ಬೃಹತ್ ಭಾಷಣವದು. ವಿಜ್ಞಾ

ನವ ಬಗ್ಗೆ ಮಾತನಾಡುತ್ತಾ, ತಮ್ಮ ಅಜ್ಞಾನವನ್ನು ಹೀಗೆ ಬಹಿರಂಗ ಪಡಿಸಬೇಕೇ ? "ಹೊರ ದೇಶವಲ್ಲೂ ನಮ್ಮ ವಿಜ್ಞಾನಿಗಳು ಭಾರತಕ್ಕೆ ಕೀರ್ತಿ ತಂದಿದ್ದಾರೆ ಪ್ರೊಫೆಸರ್ ಸುಬ್ರಮಣಿ ಅಮೇರಿಕಾದಲ್ಲಿ ಇದ್ದಾಗ್ಲೂ, ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಮರೆಯದೆ, ಅದೇ ವಿಷಯವಾಗಿ ಧ್ಯಾನಮಾಡುತ್ತಾ, Black hole of culcutta ಬಗ್ಗೆ ಬೇಕಾದಹಾಗೆ ಕಂಡುಹಿಡಿದಿದ್ದಾರೆ, ಇದಕ್ಕಾಗಿ ಅವರಿಗೆ ಈಚೆಗೆ ನೊಬೆಲ್ ಪಾರಿತೋಷಕವೂ ಸಿಕ್ಕಿದೆ" ! ಇದಕ್ಕಿಂತ ಇನ್ನೇನು ಬೇಕು !

ಇದೇ ಭಾಷಣದ ಇನ್ನೊಂದು ನುಡಿಮುತ್ತು. "ಇರುವ ವಿಷ್ಯ ಹೇಳೋದಕ್ಕೆ ನಂಗೇನೂ ಸಂಕೋಚವಿಲ್ಲ. ನಾವು ರಾಜಕಾರಣಿಗಳು ಉತ್ತಮ ನಟರು. ಅದಕ್ಕೆ ಉತ್ತಮ ನಟರು ರಾಜಕೀಯಕ್ಕೆ ಸೇರಿದ್ದಾರೆ. ಎಲ್ಲರಿಗಿಂತಲೂ ಅತ್ಯುತ್ತಮ ನಟ ಗಾಂಧಿ. ಆದರೆ ಅವರ ವಿಷಯದಲ್ಲಿ ಮೊದಲು ರಾಜಕೀಯ ನಂತರ ಸಿನಿಮಾ· ಹೇ ಹೇ ಹೆ........(ನಗು).........ಇತ್ಯಾದಿ"

'ಗಾಂಧಿ' ಚಿತ್ರದ ಬಗ್ಗೆ ತಮಾಷೆಯೋ ಅಥವ ಅಟೆನ್‌ಬರೊವಿನ ಚಿತ್ರದಲ್ಲಿ ನಟಿಸಿರುವ ಗಾಂಧಿಯೋ, ನಿಜವಾದ ಗಾಂಧಿ ಎಂದೆ ತಿಳಿದಿದ್ದಾರೊ ಈತ ಅನ್ನುವುದು ನನಗೆ ಅರ್ಥವಾಗಲಿಲ್ಲ.

ಈ ಫ್ರೀ ಎಂಟರ್‌ಟೇನ್‌ಮೆಂಟ್‌ಗಳ ಬಗ್ಗೆ ಮೊನ್ನೆ ಗೆಳತಿ ಶುಭಳ ಹತ್ತಿರ ಮಾತನಾಡುತ್ತಿದ್ದೆ. ಶುಭಾ ನನ್ನ ಹಾಗೆ ಸಪ್ಪೆ ಗೃಹಿಣಿಯಲ್ಲ. ಅವಳ ಮೆದುಳು ಚುರುಕು. ಮಾತಿನಲ್ಲಿ ಕಮ್ಯೂನಿಸ್ಟ್ ಕಳೆ ಇದೆ. ಬಲು ಜೋರಿನ ಆಸಾಮಿ. ಕೇಳಿದ ಭಾಷಣಗಳ ತಿಳಿ ಜೋಕುಗಳನ್ನು ಹೇಳಿದಾಗ ಶುಭಾ ನಗಲಿಲ್ಲ. "ನೀನೊಂದು ಪೆದ್ದು" ಅಂದ್ಲು. "ಯಾಕೆ" ಅಂದೆ. "ನಿನ್ನಂತಹವರಿಂದಲೇ ನಮ್ಮ ದೇಶ ಹಿಗಾಗಿರೋದು" ಅಂದ್ಲು. ಶುಭಳಿಗೆ ಕೋಪ ಬಂದರೆ ಹೀಗೇನೇ ಅವಳ ವ್ಯಂಗ್ಯ ನನಗೆ ಅರ್ಥವಾಗದು. ಮಾತನಾಡಿದರೆ ಬಯ್ಯುತ್ತಾಳೆಂದು ಸುಮ್ಮನಿದ್ದೆ.

"ಭಾಷಣ ಕೇಳೋಕೆ ನೀನ್ ಹ್ಯಾಗ್ ಹೋದೆ" ಅಂದ್ಲು. "ಬಸ್ಸ್‌ನಲ್ಲಿ"ಎಂದೆ.

"ಭಾಷಣಕಾರರು ಅಲ್ಲಿಗೆ ಬಂದದ್ದು ಹ್ಯಾಗೊ ?"

"ಕಾರ್‌ನಲ್ಲಿ ಯಾಕೆ ?"

"ಏನ್ ಮಾತಾಡಿದರೆ ಏನಾಯಿತು ಹೇಳು. ನಿನ್ನ ತೆರಿಗೆ ಹಣದಿಂದ ಅವರುಗಳು ಮಜ ಮಾಡ್ತಾರೆ ಮಾತು ಮಂಕಾದರೇನು, ಬುದ್ಧಿ ಎಲ್ಲಿ ಚುರುಕಾಗಿರಬೇಕೊ ಅಲ್ಲಿ ಚುರುಕಾಗಿದ್ದರೆ ಸರಿ. ನಿಮ್ಮಂತಹವರನ್ನು ನೋಡಿ ಅವರುಗಳು ನಗುತ್ತಿರಬೇಕು" ಅಂದ್ಲು.

ನಿಜ, ಆ ದಯಾಮಯ ನಿಷ್‌ಪಕ್ಷಪಾತಿ ನಗುವಿನ ಕೋಟಾನ ಎಲ್ಲರಿಗೂ ಸಮವಾಗಿ ಹಂಚಿದ್ದಾನೆ, ಅಲ್ವೆ ? ೦

ಪ್ರಿಯಾ

—ವತ್ಸಲಾದೊರೆ

ನಮ್ಮೆದುರಿನ ಹಾಗೂ ಪಕ್ಕದ ಮನೆಗಳ ಗೆಳತಿಯರಿಗೂ ನನಗೂ ನಡೆಯು ತ್ತಿದ್ದ ಶೀತಲ ಸಮರದಲ್ಲಿ ನಾನೇ ಗೆದ್ದಿದ್ದೆ. ಟಿ.ವಿ., ಫ್ರಿಜ್, ಕಾರು ಎಲ್ಲಾ ಈಕ್ವಲ್ ಆದರೆ 'ಪ್ರಿಯಾ' ಬಂದುದು ನಮ್ಮ ಮನೆಗೆ ಮಾತ್ರ.

'ಪ್ರಿಯಾ' 2–3 ಉದ್ದದ ಜಡೆಗಳನ್ನು ಬಿಟ್ಟುಕೊಂಡು ಮುದ್ದಾಗಿ ಬಂದುದು ನಮ್ಮ ಮನೆಗೆ ಮಾತ್ರ. ಅವಳಿಗಾಗಿ ವಿಶೇಷ ಪೀಠ. ಅವಳೊಡನೆ ಬಂದವರಿಗೆ ಊಟ-ಉಪಚಾರ. ನಮ್ಮ ಮಕ್ಕಳ ಹಿಗ್ಗಿಗೆ ಮಿತಿಯೇ ಇಲ್ಲ.

ಈ ಖುಷಿ 2-3 ದಿನ ಇತ್ತು. ಟ್ರ್ರ್ ಟ್ರ್ರ್ ಎಂದು ಕರೆಗಂಟೆ ಬಾರಿಸಿದೊಡನೆ ನಾಮುಂದೆ ತಾಮುಂದೆ ಎಂದು ಓಡಿಹೋಗಿದ್ದೇ ಹೋಗಿದ್ದು. ಹಲೋ ಹಲೋ ಎಂದು ಹಿರಿಹಿರಿ ಹಿಗ್ಗಿದ್ದೇ ಹಿಗ್ಗಿದ್ದು. ಅದು ಬಂದ ಹೊಸದರಲ್ಲಿ ನನ್ನ ಹಿರಿಯ ಮಗ ಕಾಲೇಜಿನಿಂದ ಬಂದೊಡನೆ ತನ್ನ ಗೆಳೆಯರೊಂದಿಗೆ ಗಂಟೆಗಟ್ಟಲೆ ಮಾತಾಡು ತ್ತಿದ್ದ. ನನ್ನ ಮಗಳು, ಒಂದೊಂದು ದಿನ ತಲೆನೋವೆಂದು ಕಾಲೇಜಿಗೆ ಚಕ್ಕರ್ ಕೊಟ್ಟು ಮನೆಯಲ್ಲೇ ಕುಳಿತು ಗೆಳತಿಯರೊಂದಿಗೆ ಕಾಲೇಜಿನ ವಿದ್ಯಮಾನ, ಟಿ.ವಿ. ಪ್ರೋಗ್ರಾಂಗಳ ವಿಮರ್ಶೆ ಮಾಡುತ್ತಿದ್ದಳು. ಯಜಮಾನರೋ ಆಫೀಸಿನಿಂದ ದಿನಕ್ಕೆ 8-10 ಬಾರಿ ಫೋನ್ ಮಾಡುತ್ತಿದ್ದರು. ಕೀಬಂಚ್ ಬಿಟ್ಟು ಬಂದೆ ಕಳಿಸು, ಇವೊತ್ತು ಸಂಜೆ ಊಟಕ್ಕೆ 4 ಜನ ಕರೆದುಕೊಂಡು ಬರುತ್ತೇನೆ, ಸಂಜೆ ಬರುವುದು ಲೇಟ್, ಯಾಕೋ ತಲೆ ನೋಯುತ್ತಿದೆ, ಇನ್ನು ಮುಂದೆ ಸಾರಿಗೆ ಅಷ್ಟು ಉಪ್ಪು ಹೊಯ್ಯಬೇಡ ಇತ್ಯಾದಿ ಅಮೋಘ ಸಂದೇಶಗಳನ್ನು ಕಳಿಸುತ್ತಿದ್ದರು.

ಈ ಮಧುಚಂದ್ರ ಬಹು ಬೇಗ ಮುಗಿಯಿತು. ನಂಟರು ಬಂದು ಒಂದು ವಾರ ಮನೆಯಲ್ಲಿದ್ದರು. ಕೈ ತುಂಬಾ ಕೆಲಸ, ಮನಸಿನ ತುಂಬಾ ಗಡಿಬಿಡಿ. ಅವರನ್ನು ಕಳಿಸಿ ಮಲಗಿದ್ದೆ. ರಾತ್ರಿ ಬಹಳ ಹೊತ್ತು ನಿದ್ದೆ ಬರಲಿಲ್ಲ. ಕೊನೆ ಗೊಮ್ಮೆ ರೆಪ್ಪೆಗೆ ರೆಪ್ಪೆ ಕೂಡೋಣವೇ ಎಂದು ಚಿಂತಿಸುತ್ತಿರುವಾಗ ಪ್ರಿಯಾ ಅಳಲಾರಂಭಿಸಿದಳು. ಯಜಮಾನರಿಗೆ ಇದ್ದಕ್ಕಿದ್ದಂತೆ ಗಾಢನಿದ್ರೆ ಬಂದು ಕಳ ಗೊರಕೆ ಹೊಡೆಯಲಾರಂಭಿಸಿದರು. ಪ್ರಿಯಾ, ಟ್ರಿಣ್–ಟ್ರಿಂಟ್ರಿಣ್–ಟ್ರಿಣ್‌ಯನ್ನು ಪುನರಾವರ್ತಿಸಿದಳು. ಎದ್ದು ಹೋಗಿ ರಿಸೀವರ್ ಕಿವಿಗೆ ಸಿಕ್ಕಿಸಿಕೊಂಡು 'ಹಲೋ' ನಮ್ಮನವಷ್ಟರಲ್ಲಿ "Trunk Call, Speak on" ಎಂದು ಅಪ್ಪಣೆ "ಹಲೋ

ನಾನು, ರೂಪಾ, ಯಾರು ? " ಎಂದೆ. ಏನು ದುರ್ವಾರ್ತೆಯೋ, ಅಪ್ಪನಿಗೋ, ಅಮ್ಮನಿಗೋ, ಅಣ್ಣನಿಗೋ ಯಾರಿಗೋ, ಏನಾಗಿದೆಯೋ, ಎಂದು ಎದೆ ಡವ ಡವಿಸುತ್ತಿತ್ತು.

" ನಿಂಗ ಯಾರು ? ಆರುಮುಗಂ ವೇಣು ?'' ಎಂದಿತು ಕಿವಿಬಿಲ್ಲೆ. ರಿಸೀವರ್ ಕುಕ್ಕಿ ಹೋಗಿ ಬಿದ್ದುಕೊಂಡೆ.

ಈಗೀಗ ನೆರೆ–ಹೊರೆಯ ಉಬ್ಬಲ್ಲು ಪಂಕಮ್ಮ ನನ್ನೊಡನೆ ಕೋಲ್ಡ್ ವಾರ್‌ನಲ್ಲಿ 'ಥಾ ' ಏರ್ಪಾಟು ಮಾಡಿಕೊಂಡಿದ್ದಾರೆ. ಮೊನ್ನೆ ನಾಲ್ಕು ಗಂಟೆಗೆ ತಾವೇ ಬಂದವರು " ರೂಪಾ ನನ್ನ ಮಗಳ ಹತ್ತಿರ ಮಾತಾಡಬೇಕು " ಎಂದು ಫೋನ್ ಎತ್ತಿ ಡಯಲ್ ಗಿರಿಗಿರಿಸಿದರು. ಮಗಳೊಡನೆ ಅಮೋಘ ಸಂಭಾಷಣೆ ಪ್ರಾರಂಭಿಸಿದರು. " ಅತ್ತೆ ಊರಿಗೆ ಹೋದರೇ? ಅಡಿಗೆ ಏನು ಮಾಡಿದ್ದೆ ? ಭಾನುವಾರ ' ಬಂಧನ ' ಕ್ಕೆ ಹೋಗಿದ್ದೆಯಾ ? ಹಬ್ಬಕ್ಕೆ ಎಂಥಾ ಸೀರೆ ತೊಗೊಂಡಿದ್ದೆ ? "

ಆ ಮಗಳು ಏನು ಅದ್ಭುತವನ್ನು ತಾಯಿಗೆ ಹೇಳಿದಳೋ !


" ಆ, ಹಾಗೇನು ? ಇನ್ನೂ 3 ದಿವಸ ? ಏಕೆ ? ಟಿಕೆಟ್........ಹೂಂ........ ಹಹ್ಹ........ಸರಿ........ಇನ್ನು ಮೇಲೆ ಹಾಗೆಲ್ಲಾ ಒಪ್ಪಬೇಡ. ಹೂಂ........" ಇನ್ನು ಎದುರುಮನೆ ಲಲಿತನ ಮಗ ಶಂಕರ್‌ನ ನಾನು ಹೋಗಿ ಕರೀ ಬೇಕು. ಆಚೆ ಮನೆ ಗೀತಾಗೆ ಅವಳ ಫ್ರೆಂಡ್ ಕಳಿಸಿರುವ ಕೋಡ್ ಮೆಸೇಜ್ ಕೊಡಬೇಕು. ಮೊನ್ನೆ ಶಂಕರ್ ಬಂದು ಸಿಗರೇಟ್ ಸೇದುತ್ತಾ ಅವಳು ಯಾರ ಹಿಂದೆ ಹೋಗುತ್ತಿದ್ದಾಳೆ. ಇವಳ ಹಿಂದೆ ಯಾರ್‍ಯಾರು ಬೆನ್ನು ಹತ್ತಿದ್ದಾರೆ. ಮತ್ತೊಬ್ಬಳು ಏನೇನು ಮೇಕಪ್ ಮಾಡಿದ್ದಾಳೆ, ಸಿ.ಎಲ್. ಲೆಟರುಗಳಲ್ಲಿ ಎಂಥೆಂಥಾ ಗ್ರಾಮ್ಯಾಟಿಕಲ್ ಮಿಸ್ಟೇಕ್ಸ್ ಇವೆ ಇತ್ಯಾದಿಗಳನ್ನು ಕುರಿತು ಅರ್ಧ ಗಂಟೆ ಮಾತಾಡುತ್ತಲೇ ಇದ್ದ. ಸಂಜೆ ಯಜಮಾನರು ಬಂದು " ಮಧ್ಯಾಹ್ನ ಯಾರ ಹತ್ತಿರ ಮಾತಾಡುತ್ತಿದ್ದೆ. ಫೋನ್ ಸಿಕ್ಕರೆ ಎಚ್ಚರ ತಪ್ಪುತ್ತಲ್ಲವೇ ? ನನಗೆ ಅರ್ಜಂಟಾಗಿ ಇನ್ಕಂಟ್ಯಾಕ್ಸ್ ಪೇಪರ್ಸ್ ಬೇಕಾಗಿತ್ತು. ರಿಂಗ್ ಮಾಡಿ ಮಾಡಿ ಬೆರಳು ನೋವು ಬಂತು " ಎಂದರು. ಸಿಡುಕಿನಿಂದ ಅಬ್ಬರಿಸಿದರು.

ನಾನು " ಹೌದು, ನಾನು ಬಾಯ್‌ಫ್ರೆಂಡ್ ಜೊತೆ ಮಾತಾಡುತ್ತಿದ್ದೆ " ಎಂದೆ.

ಇದಲ್ಲದೆ ಆಗಾಗ ಕೆಲವರು ರೋಡ್ ರೋಮಿಯೋಗಳು ಅಪಲಾಪ ಆರಂಭಿಸುತ್ತಾರೆ. ನನ್ನ ಬಿಟ್ಟು ಬೇರೆಯವರು ಫೋನ್ ಎತ್ತಿದರೆ ಆಚೆಗೆ ನಿಶ್ಯಬ್ದ;

ಒಮ್ಮೆ ಕಲ್ಕತ್ತದಲ್ಲಿರುವ ನನ್ನ ಮಗನಿಗೆ ಜ್ವರ ಬಂದಿದೆ ಎಂದು ತಿಳಿಯಿತು. ಹಂಸ ರಾಕ್ಷಸನಿಗೆ ಕಾಗದ ಕೊಟ್ಟರೆ ಹದಿನೈದೋ ಇಪ್ಪತ್ತೋ ದಿನವಾಗುತ್ತದೆ ಅಂತ ಟ್ರಂಕ್ ಕಾಲ್ ಬುಕ್ ಮಾಡಿದೆ. ಹದಿನಾರು ಗಂಟೆ ನಂತರ ಲೈನ್ ಔಟಾಫ್ ಆರ್ಡರು ಎಂದು ತಿಳಿಯಿತು. ಆಪತ್ತಿಗೆ ಆಗಲು ಈ (ಅ) ಪ್ರಿಯಾನೇ ಸರಿ!

ಮೊದಲ ಕ್ವಾರ್ಟರಿಗೆ 987 ರೂಪಾಯಿ ಬಿಲ್ ಬಂತು. ಯಜಮಾನರ ಕೋಪಕ್ಕೆ ಇಡೀ ಮನೆ ಮುದುರಿ ಹೋಯಿತು. ಪ್ರಿಯಾನ ಬಾಯಿಗೆ ಬೀಗ ಬಿತ್ತು, ನಾಲ್ಕಾರು ದಿನಗಳಲ್ಲೇ ಪ್ರಿಯಾಗೆ ಗಂಟಲು ರೋಗ ಬಂದು ಬಾಯ್ಮುಚ್ಚಿದಳು. ಅದರ ರಿಪೇರಿ ಇನ್ನೂ ಮಾಡಿಸಿಲ್ಲ.



ಮಂದಾರ

—ರಮ್ಯ

[ಇಲ್ಲಿಯವರೆಗೆ : ಮಂದಾರ, ಬಣವೆಕಲ್ಲಿನ ವಿದ್ಯಾರ್ಥಿಗಳೊಡನೆ ಪೋಲಾ-ಳ್ವನಗರಕ್ಕೆ ಬಂದಿದ್ದಾಳೆ. ಮರುದಿನ 'ಹ್ಯಾಂಲೆಟ್' ಮಂದಾರ ಜೋಡಿ ವಿಶ್ವ ವಿದ್ಯಾನಿಲಯ ಮಟ್ಟದ ಯುಗಳಗೀತೆ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಆ ರಾತ್ರಿ ಹತ್ತುಗಂಟೆಗೆ ಪೋಲಾಳ್ವ ಇಂಟರ್‌ನ್ಯಾಷನಲ್ ಸ್ಟುಡಿಯೋಸ್‌ನಲ್ಲಿ ಮಂದಾರನ ಧ್ವನಿಯ ಟೆಸ್ಟ್ ನಡೆಯಬೇಕಾಗಿದೆ. ಸ್ಕ್ರೀನ್ ಟೆಸ್ಟ್ ಇನ್ನೂ ನಿರ್ಧಾರವಾಗಿಲ್ಲ. ಕಿಂಗ್‌ಲಿಯರ್ ಹಾಗೂ ಒಥೆಲೋ ಹೊಟೆಲ್ ಹೈಜಿಂಕ್ಸ್‌ನಲ್ಲಿ ಬಿಡಾರ ಹೂಡಿದ್ದಾರೆ.

ರಾಜೀವ ರಾತ್ರಿ ಹತ್ತುಗಂಟೆಗೆ ಹೋಗಿನೋಡಿದಾಗ ಮಂದಾರ ಕೋಣೆಯಲ್ಲಿ ಇರಲಿಲ್ಲ. ಎಂಟೂವರೆ ಗಂಟೆಗೇ ಯಾರಜೊತೆಯಲ್ಲೋ ಹೋದಳೆಂದು ವಸಂತಾ ಹೇಳಿದಳು. —ಮುಂದೆ ಓದಿ]

ವಸಂತ ತನ್ನ ಕ್ಯಾಂಪ್‌ಬೆಡ್ ಮೇಲೆ ಹೊರಳಾಡುತ್ತಿದ್ದಳು, ನಿದ್ದೆ ಮಂಗಮಾಯವಾಗಿಬಿಟ್ಟಿತ್ತು. ಕ್ಯಾಚ್‌ಗಳನ್ನು ಕಳೆದುಕೊಂಡು ಸೋಲೆದುರಿಸು ತ್ತಿರುವ, ಕ್ರಿಕೆಟ್ ಟೀಂ ನಾಯಕಿಯಂತೆ ಅವಳ ಸ್ಥಿತಿ. ಜೀವನ ಎಷ್ಟು ವಿಚಿತ್ರ ! ವಿಧಿಗೆ, ಜನ್ನ ಮಹಾಕವಿ ಹೇಳಿದಹಾಗೆ 'ಕಣ್ಣೆಲ್ಲಕ್ಕುಂ'. ಹ್ಯಾಂಲೆಟ್ ಯಾವ ಯುವತಿಗಾದರೂ ಕನಸಿನ ಯುವಕರತ್ನವಾಗಬಲ್ಲ. ಬುದ್ಧಿವಂತ, ವಿವೇಕಿ, ವಿನಯ ಶಾಲಿ, ಸಂಗೀತದಲ್ಲಿ ಯಾರಿಗೂ ಕಡಿಮೆ ಇಲ್ಲ. ವಿದ್ಯಾ, ವಿನಯ, ಯೌವನ ಸಂಪನ್ನನಾದ ಅವನಿಗೆ ವ್ಯಂಗ್ಯ ಚಿತ್ರದಂತಿರುವ ಮಂದಾರನ ಹುಚ್ಚು. ಅವಳು N-3 ಗ್ರೇಡಿನ ಗಾಯಕಿ. ತನ್ನ ಸಂಗೀತ ಅವನಿಗೆ ತುಂಬಾ ಮೆಚ್ಚುಗೆ. ಆದರೆ.... ಹ್ಯಾಂಲೆಟ್ ಎಂದಾದರೂ ತನ್ನ ಮೂರ್ಖತನವನ್ನು ಕಳೆದುಕೊಂಡು, ತಲೆ ರಿಪೇರಿ ಮಾಡಿಕೊಂಡು ತನ್ನ ಬಳಿಗೆ ಬಂದಾನೇ...... ಚಿಂತೆಗೆ ಕೊನೆಯಾಗಲಿಲ್ಲ. ಆದರೆ ಎಚ್ಚರ ಕೊನೆಗೊಂಡು ಜೋಂಪು ಬಂದಿತು. ಹ್ಯಾಂಲೆಟ್‌ಗಾಗಿ ವಸಂತಕಾಯು ತ್ತಿದ್ದಳು. ಅವಳ ಮುಖ ಎಲಿಜಬೆತ್ ಟೇಲರ್ ಮುಖಕ್ಕಿಂತಲೂ ಚೆನ್ನಾಗಿದ್ದರೂ, ಕಾಂತಿಹೀನವಾಗಿತ್ತು. ತರಕಾರಿ ಹಚ್ಚಿದ ಮೇಲೆ ಕೈಯನ್ನು ಮುಖಕ್ಕೊರೆಸಿ ಕೊಂಡರೆ ಕಾಂತಿ ಹೆಚ್ಚುತ್ತದೆ, ಎಂದು ಕಡುಜಾಣೆಯೊಬ್ಬಳು ಕನ್ನಡ ಪತ್ರಿಕೆಯಲ್ಲಿ ಬರೆದಿದ್ದನ್ನು ಓದಿ ಅವಳು ಈರುಳ್ಳಿ ಹಚ್ಚಿದಳು. ಕಣ್ಣ ತುಂಬಾನೀರು ತುಂಬಿತು.

ಅದು ಹ್ಯಾಂಲೆಟ್‌ಗಾಗಿ ಕರೆದ ವಿರಹಾಶ್ರು ಎಂದುಕೊಂಡು, ಹಸಿಮೆಣಸಿನ ಕಾಯಿ ಹಚ್ಚಿದಳು. ನಂತರ ಈ ಕನ್ನಡದ ಕಡುಜಾಣೆ ಕೈಯನ್ನು ಮುಖಕ್ಕೆ ಸವರಿದಳು. ವಿರಹದುರಿ ಹೆಚ್ಚಾಗಿ ಮುಖ ದಹಿಸಲಾರಂಭಿಸಿತು.

"ಹ್ಯಾಂಲೆಟ್, ನನ್ನ ಹ್ಯಾಂಲೆಟ್, ನೀನೆತ್ತ ಹೋದೆ. ಈ ಕಣ್ಣುಗತ್ತಲೆಯಲ್ಲಿ ಏಕೆ ಕೈಬಿಟ್ಟೆ, ಬಾ ಹ್ಯಾಂಲೆಟ್ ನಿನಗಾಗಿ ಮುಂಗುರುಳನ್ನು ಕತ್ತರಿಸಿ ಕೈಯಿಂದ ತಿರಿಚಿ ಸ್ಪೈರಲ್ ಸ್ಪ್ರಿಂಗ್ ಆಕಾರಕ್ಕೆ ತಿರುಗಿಸಿದ್ದೇನೆ. ಅದರೊಂದು ಸುತ್ತಿನಲ್ಲಿ ನಾವಿಬ್ಬರೂ ಕುಳಿತು ಪ್ರೇಮ ವಿಹಾರ ಮಾಡೋಣ. ಖಂಡಿತವಾಗಿ ಹ್ಯಾಂಲೆಟ್, ಇದು ಹಸಿಮೆಣಸಿನ ಕಾಯಿಯ ಉರಿಯಲ್ಲ, ನಿನಗಾಗಿ ನಾನು ಅನುಭವಿಸುವ ವಿರಹದ ಉರಿ. ಇದೋ ನಿನ್ನನ್ನು ಕರೆದು ಈ ಗೀತೆಯನ್ನು ಹೇಳುವೆ, ಉದಯನ ವಿರಹದಿಂದ ವಾಸವದತ್ತೆಯೂ ಹೀಗೆ ಬ ಳ ಲ ಲಿ ಲ್ಲ. ಕೇಳು ಹ್ಯಾಂಲೆಟ್ ; ಎಲ್ಲಿರುವೆ ?" ಎಂದಳವಳು. "ವಸಂತ, ವಸಂತ" ಹ್ಯಾಂಲೆಟ್ ಕೂಗಿದದನಿ ಬಾಗಿಲು ತಟ್ಟಿದ ಸದ್ದು.

"ಮಂದಾರ, ಮಂದಾರ" ಹ್ಯಾಂಲೆಟ್ ಕರೆದದನಿ.

ಮಂದಾರಕ್ಕೆ ಧಿಕ್ಕಾರ !

"ಮಂದಾರ"

ಹೌದು ಹ್ಯಾಂಲೆಟ್ ದನಿ............

ವಸಂತ ಎದ್ದಳು. ಬಾಗಿಲು ತಟ್ಟಿದ ಸದ್ದು ನಿಜಕ್ಕೂ ಕೇಳಿತು.

"ವಸಂತ"........

"ಓ"

ವಸಂತ ಜೀರೋ ಕ್ಯಾಂಡ್ಲ್ ಬೆಳಕಿನಲ್ಲೇ ಎದ್ದು ಹೋಗಿ ಬಾಗಿಲು ತೆರೆದಳು. ಕಾರಿಡಾರಿನ ಬಲ್ಬ್ ಇದ್ದಕ್ಕಿದ್ದಂತೆ ಬರ್ನ್ ಆಗಿ ಹೋಯಿತು.

''ಶಿವೂ........ ಇದೇನು ಇಷ್ಟು ಹೊತ್ತಿನಲ್ಲಿ...."

"ಮಂದಾರ ಇದ್ದಳೇ ?"

''ನಾನಿಲ್ಲವೇ ಹ್ಯಾಂಲೆಟ್ ? ಏನು ಆದು ಹೇಳು"

"ಮಂದಾರನೇ ಬೇಕು"

"ನಿನಗೆ ಮಂದಾರ ಅಬ್ಸೆಷನ್ ಬಂದಿದೆ ಅಲ್ಲವೇ"

"ಅಬ್ಸೆಷನ್ ವೈಫುಟ್. ಇದು ಆಸ್ತಿವಾಪಸಾತಿ"

''ಪ್ರೇಮವೋ, ಲವ್ ಲೆಟರೋ ಕೈಗಡವೋ ? ಶಿವು ನೀನು ಕೆಟ್ಟುಹೋದೆ"

"ನೋ ಜೋಕಿಂಗ್, ಮಂದಾರ ಎಲ್ಲಿ ?"

"ಇಷ್ಟು ಹೊತ್ತಿನಲ್ಲಿ ಶಿವು ಏನು ಅಂಥ ಆಸ್ತಿ ವಿಭಾಗ?"

"ಹಂತ್ತುಗಂಟೆಗೆ ರಾಜೀವ ಎಲ್ಲಿಗೋಹೋದ. ನನಗೆ ಬೇಸರ ಬಂದು ಹಾಗೇ ವಾಕಿಂಗ್ ಹೋದೆ ಹತ್ತಿಪ್ಪತ್ತು ನಿಮಿಷವಾಗಿರಬಹುದು. ರಸ್ತೆಯಲ್ಲಿ ಏನೋ ಮುಖಕ್ಕೆ ಬಂದು ಮುಚ್ಚಿತು. ನೋಡಿದರೆ ಇದು, ಅಂದಹಾಗೆ ಈ ಊರಿಗೆ ಬರುವ ಕೆಲವುದಿವಸ ಹಿಂದೆ ಇದನ್ನು ಅಥವಾ ಇಂಥದನ್ನು ಮಂದಾರ ಕೊಂಡಿದ್ದಳು. ಆದೇಕೆ ಬೀದಿಯಲ್ಲಿ ನನ್ನ ಮುಖ ಮುಚ್ಚಿತು ?"

ವಸಂತ ಆತಂಕದಿಂದ ನರಳಿದಳು.

''ಅಪಾಯ ಶಿವು ?"

''ಯಾರಿಗೆ ?"

ಮಂದಾರ ಎಂಟೂವರೆ ಗಂಟೆಗೇ ರೂಂ ಬಿಟ್ಟು ಮೋಟರ್ ಬೈಕ್ ಮೇಲೆ ಯಾರ ಜೊತೆಗೋ ಹೋದ ಸುದ್ದಿಯನ್ನು ವಸಂತ ಹೇಳಿದಳು. ಹ್ಯಾಂಲೆಟ್ ಗುಡ್ ನೈಟ್ ಕೂಡಾ ಹೇಳದೆ ಕಾರಿಡಾರಿನ ಕತ್ತಲಿನಲ್ಲಿ ಮಾಯವಾದ.

o o o o

ಪ್ರಿನ್ಸಿಪಾಲರು ರಾಜೀವ ಹೇಳಿದುದನ್ನು ಕೇಳಿ ಹಣೆಹಣೆ ಚಚ್ಚಿಕೊಂಡವರೇ ಎದ್ದುನಿಂತರು.

''ರಾಜೀವ, ಕೇಳಿಲ್ಲಿ. ಮಂದಾರನ ತಂದೆ ಊರಲ್ಲಿದ್ದಾರೆ ಎಂದ ಮೇಲೆ ಅವರು ಯಾರನ್ನೋಕಳಿಸಿ ಅವಳನ್ನು ಕರೆಸಿ ಕೊಂಡಿರಬಹುದು. ಸಂಜೆ ಅವರು ಯಾರದೋ ಕಾರಿನಲ್ಲಿ ಅವಳನ್ನ ಕರೆದುಕೊಂಡು ಹೋಗಿದ್ದರು. ಈಗ ಮೋಟರ್ ಬೈಕ್ ಮೇಲೆ ಅವಳನ್ನು ಕರೆದುಕೊಂಡು ಹೋದವರು ಯಾರೋ ಏನೋ !"

"ಸರ್, ನೀವು ನಿಮ್ಮ ಸ್ನೇಹಿತರನ್ನು ನೋಡಲು ಹೋಗಬೇಡಿ. ಇಲ್ಲೇ ಇರಿ ನಾನು ಇದರ ಸಮಾಚಾರ ನೋಡಿಕೊಂಡು ಬರುತ್ತೇನೆ"

"ರಾಜೀವ್, ನಾನು ಹೋಗದೇ ಇರುವಂತಿಲ್ಲ, ಇದು ವಾಸು ಬಬ್ಬರ್ಯನ ಕೆರಿಯರ್‌ಗೆ ಸಂಬಂಧಿಸಿದ್ದು, ನಾನು ಹೋಗಿ ಎಷ್ಟೇ ಹೊತ್ತಾಗಲಿ ಹಿಂದಿರುಗುತ್ತೇನೆ. ಆ ವೇಳೆಗೆ ನೀನು .... ಅಂ ಈಗ ಹೋಗಿ ಏನು ಮಾಡುತ್ತೀ ? ನಡುರಾತ್ರಿ........ ನೀನೇ ಇಲ್ಲಿರು"

ರಾಜೀವ್, ವೆಂಕಟಪ್ಪನವರ ಮಾತನ್ನು ಕೇಳದೆ ಹೊರ ಹೊರಟ. ಮಂದಾರನ ಪ್ರಾಣ ಮಾನಗಳ ಪ್ರಶ್ನೆ ಇದರಲ್ಲಿ ಅಡಗಿದಂತೆ ಅವನಿಗೆ ತೋರಿತು. ಅವನು ನಗರಕ್ಕೆ ಅನೇಕ ಬಾರಿ ಬಂದಿದ್ದರೂ ಅದರ ಪೂರ್ಣಮಾಹಿತಿ ಗೊತ್ತಿರಲಿಲ್ಲ.

ಹಾಗೇ ಅಲೆಯುತ್ತಾ ಅವನು ಹೊಂಡದ ಬೀದಿಗೆ ಬಂದ. ಮಸಕು ಕತ್ತಲಲ್ಲಿ ಅವನು ಪೋಲಾಳ್ವ ಇಂಟರ್ ನ್ಯಾಷನಲ್ ಸ್ಟುಡಿಯೋಸ್ ಬೋರ್ಡನ್ನು ನೋಡಿದ. ಮಹಡಿಯ ಮೆಟ್ಟಿಲನ್ನು ಹತ್ತಿದಾಗ ಅವನಿಗೆ ಕಾಣಸಿದ್ದು ಪೋಲಾಳ್ವ ಪೆಯಿಂಟರ್ಸ್ ಪ್ರೊ॥ ದಂಡಪಾಣಿ, ಬೋರ್ಡು ಸುತ್ತ ಮುತ್ತೆಲ್ಲಾ ಚಿಕ್ಕ ಚಿಕ್ಕ ವಾಸದ ಮನೆಗಳು. ಗಲ್ಲಿಯ ಒಂದು ಗೂಡಿನಲ್ಲಿ ಮಗು ಅಳುವ ಸದ್ದು. ಒಂದೆರಡು ನಾಯಿಗಳು ಬೊಗಳುವ ಸದ್ದು. ಚರಂಡಿಯಿಂದ ಭಾರೀ ಹೆಗ್ಗಣವೊಂದು ರಸ್ತೆಗೆ ಬಂತು.

ಇದು ಸ್ಟುಡಿಯೋ ಅಲ್ಲ ಬರೀಬೋರ್ಡು ಎಂಬ ತೀರ್ಮಾನಕ್ಕೆ ಬಂದ ರಾಜೀವ ರಸ್ತೆಯಲ್ಲಿ ಮುಂದುವರಿದು ಹೋಟೆಲ್ ಹೈ ಜಿಂಕ್ಸ್‌ಗೆ ಬಂದ. ಬಾಗಿಲು ಮುಚ್ಚಿತ್ತು. ರಾಜೀವ ಪಕ್ಕದ ಮೆಟ್ಟಿಲೇರಿ, ಅಲ್ಲಿದ್ದ ಆಳನ್ನು ಎಬ್ಬಿಸಿ ಕದತೆರೆಸಿದ. ಬಣವೇಕಲ್ಲಿನಿಂದ ಬಂದ ಇಬ್ಬರು ನೂರಾಹದಿಮೂರನೇ ಕೋಣೆಯಲ್ಲಿದ್ದಾರೆ ಎಂದು ತಿಳಿದು, ಹೋಗಿ ಬಾಗಿಲು ಬಡಿದ. ಒಳಗೆ ಸದ್ದಿಲ್ಲ.

ಕೆಳಗಡೆ ರಸ್ತೆಯಲ್ಲಿ ಒಂದು ಮೋಟಾರು ಬೈಕ್ ಗುರುಗುಡುವ ಸದ್ದು ಕೇಳಿತು. ರಾಜೀವ ಕೆಳಕ್ಕಿಳಿದು ಹೋಗಿ ನೋಡಿದ. ಅದು ರಸ್ತೆಯ ಮತ್ತೊಂದು ತುದಿಗೆ ಹೋಗಿ ಬಿಟ್ಟಿತು. ರಾಜೀವ ಮತ್ತೆ 113ನೇ ರೂಮಿಗೆ ಹೋಗಿ ಐದು ನಿಮಿಷ ಬಾಗಿಲು ಬಡಿದರೂ ಸದ್ದಿಲ್ಲ. ಬೇಸತ್ತ ಅವನು ಇನ್ನೊಮ್ಮೆ ಬಾಗಿಲನ್ನು ನೋಡಿದ.

ಪರಮಾಶ್ಚರ್ಯ ಚಿಲಕ ಹೊರಗಡೆಯಿಂದ ಹಾಕಿತ್ತು. ಬೀಗವಿರಲಿಲ್ಲ. ಬಾಗಿಲು ತೆರೆದು ರಾಜೀವ ಒಳಹೋಕ್ಕು ದೀಪ ಹಾಕಿದ ಮಂಚದ ಮೇಲೆ ಕಿಂಗ್ ಲಿಯರ್ ಎಚ್ಚರ ತಪ್ಪಿ ಬಿದ್ದಿದ್ದ. ಕೋಣೆಯಲ್ಲಿ ಏನೋವಾಸನೆ ಕ್ಲೋರೋಫಾರಂ ಇರಬೇಕು.

ಮಂಚದ ಕೆಳಗೆ ಏನೋ ಸದ್ದು, ಯಾರೋ ನರಳಿದ ಸದ್ದು. ರಾಜೀವ ಕೈ ಚಾಚಿ ಕೆಳಗಿದ್ದ ದೇಹವನ್ನು ಎಳೆದ. ಒಥೆಲೋ ! ಕೈಕಾಲು ಕಟ್ಟಿದೆ, ತಲೆಯಿಂದ ರಕ್ತ ಜಿನುಗುತ್ತಿದೆ.

ರಾಜೀವ ಗಾಬರಿಯಾದರೂ, ಧೈರ್ಯ ತೆಗೆದುಕೊಂಡು, ಮೇಜಿನ ಮೇಲಿದ್ದ ನೀರನ್ನು ಅವನ ಮುಖಕ್ಕೆ ಸುರಿದ.

ಶಿವು ಏನೇನೋ ಬಡಬಡಿಸಿದ. ಅದರ ಸಾರಾಂಶ ಇಷ್ಟು. ಕಿರಿಚಾಬದಿಯಿಂದ ಅವರಿಗೆ ಈ ದುರ್ಗತಿ ಬಂದಿತ್ತು.

ರಾಜೀವ ಒಥೆಲೋವಿನ ಕಟ್ಟುಗಳನ್ನು ಬಿಚ್ಚಿ "ಹಾಗಾದರೆ ಮಂದಾರ ಎಲ್ಲಿ" ಎಂದ "ಹಾಸ್ಟೆಲಿನಲ್ಲಿ ಬಿಟ್ಟು ಬಂದೆವಲ್ಲಾ ?" ಎಂದ "ಅವಳು ಅಲ್ಲಿ ಇಲ್ಲ, ಯಾರೋ ಅವಳನ್ನು ಮೋಟರ್ ಬೈಕ್ ಮೇಲೆ ಕರೆದುಕೊಂಡು ಹೊದರು. ಅವಳ ಸಲ್ವಾರ್, ನಡುಬೀದಿಯಲ್ಲಿ ಹಾರಿ ಬಂದು ಹ್ಯಾಂಲೆಟ್ ಮುಖಕ್ಕೆ ಸುತ್ತುವರಿಯಿತು."

"ಹಾಗಾದರೆ ಅವಳು......."

"ಶಿವು, ನಿನ್ನ ಮೂರ್ಖತನದ ಪ್ರತಿಫಲ ಇದು. ನಿನ್ನ ತಲೆಗೆ ಹೊಡೆದವನು, ಇನ್ನಷ್ಟು ಜೋರಾಗಿ ಹೊಡೆದಿದ್ದರೆ, ಚೆನ್ನಾಗಿರುತ್ತಿತ್ತು !"

ಕೆಳಗಡೆ ಮತ್ತೆ ಮೋಟರ್ ಬೈಕ್ ಗುರುಗುಟ್ಟಿದ ಸದ್ದು ಕೇಳಿತು.

ರಾಜೀವ ಒಥೆಲೋವಿನ ತಲೆಗೆ ಹೊಡೆದು "ತೆಪ್ಪಗೆ ಬಿದ್ದರು"

"ಹಾಗಾದರೆ, ನನ್ನ ಕಾರು........"

"ಎಲ್ಲಿದೆ ?"

"ಏನಾಯಿತು ?"

"ಹೋಯಿತು!"

"ನನ್ನ ಕಾರು, ಪಕ್ಕದ ಗ್ಯಾರೇಜಿನಲ್ಲಿದೆ. ಈ ಬೀಗದ ಕೈ ತೆಗೆದುಕೋ...."

ರಾತ್ರಿಯ ನೀರವತೆಯಲ್ಲಿ ಯಾರೋ ಮೆಟ್ಟಿಲು ಹತ್ತಿ ಬಂದ ಸದ್ದು ಕೇಳಿತು. ರಾಜೀವ ಎದ್ದು ಬಾಗಿಲ ಬಳಿಗೆ ಹೊದ. ಬಾಗಿಲು ತೆರೆಯಲು ಆರಂಭವಾದ್ದರಿಂದ ಅವನು ಪಕ್ಕಕ್ಕೇಸರಿದು ಗೋಡೆಗೆ ಬೆನ್ನುಮಾಡಿ ಮೆಲ್ಲಗೆ ಉಸಿರಾಡುತ್ತಾನಿಂತ.

ಕೋಣೆಯೊಳಕ್ಕೆ ಸರಾಯಿವಾಸನೆ ನುಗ್ಗಿ ಬಂತು. ಅದರ ಹಿಂದೆಯೇ ಒಂದು ವ್ಯಕ್ತಿ ಬಂದು ಶಿವು ಮಂಚದ ಈಚೆಗೆ ಮಲಗಿದ್ದನ್ನೂ, ಕೈಕಾಲು ಕಟ್ಟಿದ ಹಗ್ಗಗಳು ಬಿಚ್ಚಿದ್ದನ್ನು ಗಮನಿಸಿದ "ಕಿರಿಚಾಬದೀ !" ಎಂದು ಗರ್ಜಿಸಿ, ಕೋಣೆಯ ಹೊರಕ್ಕೆ ಹೋಗಿ 3ನೇಯ ರೂಮಿನ ಬಾಗಿಲು ತಟ್ಟಿದ.

ಂ ಂ ಂ ಂ

ರಾತ್ರಿ 8½ ಗಂಟೆಯ ಸಮಯದಲ್ಲಿ ಮಂದಾರ ಊಟ ಮುಗಿಸಿಕೊಂಡು ಆಡಿರ್ಷಗಾಗಿ ಕಾತರದಿಂದ ಕಾಯುತ್ತಿದ್ದಳು. ತನ್ನ ಹೊಸ ಕುರ್ತಾ, ಖಮೀಜ್ ಗಳನ್ನು ಧರಿಸಿ, ಅಸೆಂಬ್ಲಿ ಅಧಿವೇಶನಕ್ಕೆ ಮೊದಲಬಾರಿಗೆ ಹೊರಟ ಎಮ್ಮೆಲ್ಯೆ ಯಂತೆ ತುಡಿಯುವ ಹೃದಯದ ಆ ವೇಗವನ್ನು ಕಷ್ಟದಿಂದ ತಡೆದು, ಕಿಟಕಿಯ ಹೊರಗಡೆಗೆ ನೋಟವನ್ನು ಮತ್ತೆಮತ್ತೆ ಹರಿಸುತ್ತಿದ್ದಳು, ತನ್ನ ಬಿಳಿಯ ಸಲ್ವಾರನ್ನು ಮತ್ತೆಮತ್ತೆ, ಅಕ್ಯಾಡಮಿ ಪ್ರಶಸ್ತಿಯನ್ನು ಪಡೆದ ಬಡಸಾಹಿತಿ, ಆ ಸುದ್ದಿಯನ್ನು ತಂದ ಕಾಗದವನ್ನು ನೇವರಿಸುವಂತೆ ನೇವರಿಸುತ್ತಿದ್ದಳು.

ಮೋಟರ್ ಸೈಕಲ್ ಬಂದು ಹಾಸ್ಟೆಲಿನ ಮುಂದೆ ಬಂದು ನಿಂತಿತು. ನೀಲಿ ಜೀನ್ಸ್, ಕೆಂಪುಪಟ್ಟೆ ಷರ್ಟ್ ತೊಟ್ಟ, ನೆತ್ತಿಯಮೇಲಿನ ಕೂದಲುದುರಿದ, ಕ್ಲೋಸ್ ಕ್ರಾಪ್‌ಕಟ್ ಮಾಡಿದ ವ್ಯಕ್ತಿಯೊಬ್ಬ, ಕೈಯಲ್ಲಿ ಹೆಲ್ಮೆಟ್ ಹಿಡಿದು ಕೋಣೆಗೆ ಬಂದ.

"ಮಂದಾರ ಯಾರು ?" ಎಂದು ಕೇಳಿದ. ಅವಳು ಎದ್ದು ನಿಂತಳು, ಅವನ ಕೈಸನ್ನೆಯಂತೆ ಹೊರಕ್ಕೆ ಹೋದಳು. ಆ ವ್ಯಕ್ತಿ ತನ್ನ ಹೆಸರನ್ನು ಕಿರಿಚಾಬದಿ ಎಂದು ಹೇಳಿ, ಕತಿರ ಬದಿ ಹಾಗೂ ಅಣ್ಣಯ್ಯ ಅವರ ಅಜ್ಞೆಯಂತೆ ಅವಳನ್ನು ಕರೆದೊಯ್ಯಲು ಬಂದಿರುವುದಾಗಿ ತಿಳಿಸಿದ. ಹೋಟೆಲ್ ಹೈಜಿಂಕ್ಸ್‌ನ 113ನೇ ಕೋಣೆಯಲ್ಲಿ ಶಿವನ್ ಹಾಗೂ ಅವಳ ಡ್ಯಾಡಿಯೊಡನೆ ಅವರು ಕುಳಿತಿರುವುದಾಗಿ ಹೇಳಿದ.

ಮಂದಾರ ಮೋಟರ್ ಬೈಕ್ ಹತ್ತಿದಳು, ಎರಡು ಕಿ.ಮೀ. ಹೋಗುವುದ ರೊಳಗೆ ಅವಳ ಸಲ್ವಾರ್ ಹಾರಿಹೋಗಿ ರಸ್ತೆ ಅಡ್ಡಲಾದ ತಂತಿಗೆ ತೂಗುಬಿತ್ತು.

ಕಿರಿಚಾಬದಿ ಒಳ್ಳೇದು ನನಗನುಕೂಲ ಎಂದು ಮಂದಾರ ಎಷ್ಟು ಕಿರಿ ಚುತ್ತಿದ್ದರೂ ಬೈಕನ್ನು ವೇಗವಾಗಿ ಬಿಟ್ಟ.

ಹೋಟೆಲಿಗೆ ಹೋದೊಡನೆ ಕಿರಿಚಾಬದಿ ತಮ್ಮ ಕ್ಯಾಮರಾಮನ್ ಹಾಗೂ ರೆಕಾರ್ಡಿಸ್ಟ್ ಎಂದು ಹೇಳಿ ಅವನು ಹೇಳಿದಂತೆ ಕೇಳಲು ಅಪ್ಪಣೆಕೊಟ್ಟು ಕತಿರಬದಿ

ಹಾಗೂ ಅಣ್ಣಯ್ಯ ಜಾಗ ಬಿಟ್ಟರು. ಸ್ಟುಡಿಯೋಗೆ ಮಂದಾರ ಒಬ್ಬಳನ್ನೇ ಕರೆದೊಯ್ಯುವುದಾಗಿ ಹೇಳಿ ಕಿರಿಚಾಬದಿ, ಮಂದಾರನನ್ನು ಆಟೋದಲ್ಲಿ ನಗರದ ಹೊರವಲಯದಲ್ಲಿದ್ದ ಒಂದು ಕೋಣೆಗೆ ಕರೆದೊಯ್ದ. ಅವಳನ್ನಲ್ಲಿ ಬಿಟ್ಟು, ಬಾಗಿಲಿಗೆ ಬೀಗ ಹಾಕಿಕೊಂಡು ಹೋಟಲಿಗೆ ಬಂದ. ಅಲ್ಲಿ ಹತ್ತುಪೆಗ್ ವಿಸ್ಕಿ ಹಾಕಿ ಬಾಯಿಗೆ ಬಂದಂತೆ ಬಡಬಡಿಸಲಾರಂಭಿಸಿದ.

ಕಿಂಗ್‌ಲಿಯರ್‌ಗೆ ಇದೀಗ ತನ್ನ ಮೋಹ ತನ್ನ ಮಗಳನ್ನು ಅಧಃಪತನದತ್ತ ಎಳೆದೊಯ್ದಿರುವುದು ಮನದಟ್ಟಾಯಿತು. ಕಿರಿಚಾಬದಿಯನ್ನು ಅವನು ಬೈದು ಕೈಯೆತ್ತಿದ. ಕಿರಿಚಾಬದಿ ತ್ನವ ಜೇಬಿನ ಕರ್ಚೀಫಿನಿಂದ ಲಿಯರ್ ನನ್ನ ಪ್ರಜ್ಞಾಹೀನನನ್ನಾಗಿ ಮಾಡಿ, ಒಥೆಲೋವನ್ನು ಸ್ಪ್ಯಾನರಿಂದ ಹೊಡೆದು, ಅವನ ಕೈಕಾಲು ಕಟ್ಟಿ ಹಾಕಿ ಬಾಗಿಲಿಗೆ ಹೊರಗಿನಿಂದ ಚಿಲಕ ಹಾಕಿ ಹೊರಕ್ಕೆ ಹೋದ.

3ನೇಯ ರೂಮಿನಲ್ಲಿ ಸ್ವಲ್ಪಹೊತ್ತು ಇದ್ದು ನಂತರ ಆಟೋದಲ್ಲಿ ನಗರದ ಆಚೆಗೆ ಹೊರಟು ಹೋದ.

o o o o

ದಿಕ್ಕುದಸೆಯಿಲ್ಲದೆ ಅಲೆಯುತ್ತಿದ್ದ ಹ್ಯಾಂಲೆಟ್, ನಗರದ ಹೊರವಲಯದಲ್ಲಿ ನಿಂತ. ಅಲ್ಲೊಂದು ಪಗಡೆಮರ ಅಥವಾ ನಿತ್ಯಮಲ್ಲಿಗೆ.

ಅದರ ಸುಗಂಧದಿಂದ ಮೋಹಿತನಾದ ಅವನು, ಕಾಮುಪಲಾಸ್ ರಾಗವನ್ನು ಆಲಾಪಿಸಲಾರಂಭಿಸಿದ, ಎಷ್ಟು ಹೊತ್ತಾಯಿತೋ ಏನೋ ಇದ್ದಕ್ಕಿದ್ದಂತೆ ಎದರು ಕೋಣೆಯಲ್ಲಿ ದೀಪ ಹತ್ತಿತು. ಕಾಮುಪಲಾಸ್, ನಿಜಕ್ಕೂ ದೀಪಕ ರಾಗವೇ ಎಂದು ಯೋಚಿಸಿದ. ಕೋಣೆಯಲ್ಲಿ ಮಂದಾರ !

(ಕೊನೆಯು ಕಂತು ಮುಂದಿನ ತಿಂಗಳು)

ಶೌರಿ ಬಂದ

—ಕೇಫ

ಎಲ್ಲಾ ಜನಕ್ಕೂ ಮನಸ್ಸಿನಲ್ಲಿ ಶಾಶ್ವತವಾಗಿ ನೆನಪಿನಲ್ಲಿರೋ ಇವೆಂಟುಗಳು ಯಾವುವು ಅಂದ್ರೆ—ತಮಗೆ ಲೈಫ್‌ನಲ್ಲಾಗೋ ಆಕ್ಸಿಡೆಂಟುಗಳೇ. ಬೆಲ್ಲದ ಡಬ್ಬದಲ್ಲಿ ಕೈ ಇಳಿಬಿಟ್ಟಾಗ ಚೇಳುಕುಟಿಕಿದ್ದೂ, ಮೊದಲ್ನೇ ಸಿಗರೇಟ್ ಹಚ್ಚಿದಾಗ ಕೈಸುಟ್ಟಿ ಕೊಂಡಿದ್ದು, ಪರೀಕ್ಷೇಲಿ ಕಾಪಿ ಹೊಡೆದು ಸಿಕ್ಕಿ ಹಾಕ್ಕೊಂಡಿದ್ದೂ, ಅಪ್ಪನ ಜೋಬಿಗೆ ಕೈಹಾಕಿದಾಗ್ಲೇ ಅಮ್ಮ ನೋಡಿದ್ದು, ಚೇಪೇಮರ ಹತ್ತಿದಾಗ ಮರದ ಕೆಳಗೆ ಅಲ್ಸೇಷಿ ಯನ್ ಬಂದು ನಿಂತಿದ್ದೂ, ಕದ್ದು ಸಿನಿಮಾದಲ್ಲಿ ಕೂತಿರೋವಾಗ್ಲೇ ಪಕ್ಕದ ಸೀಟಿಗೆ ಮೇಷ್ಟ್ರು ಬಂದು ವಕ್ಕರಿಸೋದೂ—ಇವೆಲ್ಲಾ ಮರೆಯಲಾಗದ ಅನುಭವಗಳು.

ಶೌರಿ—ನನಗೆ ಮೊದಲು ಸಿಕ್ಕಿದ್ದು ನಾನು ಮರೆಯೋ ಹಾಗೇ ಇಲ್ಲ.

ಮಾಧು ನಾನು ಕ್ಲಾಸ್‌ಮೇಟ್ಸು. ಇಬ್ರೂ ಮೂರ್ನೇ ಬಾರಿ ಎಸ್.ಎಸ್. ಎಲ್.ಸಿ. ಪಾಸ್ ಮಾಡಿದ್ರೂ ನಾನು ಪೆಚ್‌ಪೆಚ್ಚಾಗಿ ಇಂಟರ್‌ಸೇರ್ದೆ. ಮಾಧೂ ಮೆಡಿಕಲ್ ಸೇರಿ ಕುಂಟ್ತಾನೇ ಪಾಸ್ ಮಾಡಿ ಡಾಕ್ಟರ್ ಆದ. ನಾನು ಬಿ.ಎ. ಮಾಡಿ ಅನಜೇಕೇಟೆಡ್ ಅನೇಂಪ್ಲಾಯ್ಡ್ ಆದೆ. ಮಾಧು—ಜೌಬೀನೇಗಲ್ಲೀಲಿ ಷಾಪ್ ಇಟ್ಟ. ಒಂದು ದಿನ ನಂಗೆ ಅದೇಕೋ ಏನೋ ಬೆಳಗಿನ ಜಾವ ಎರಡು ಸೀನುಗಳು ಒಟ್ಟಿಗೇ ಬಂದ್ವು. ಆ ಇವೆಂಟ್‌ನ ಮಾಧೂಗೆ ರಿಪೋರ್ಟ್ ಮಾಡೋಣಾಂತ ಅವನ ಷಾಪಿಗೆ ಹೋದೆ. ಮಾಧು ಒಳರೂಮಿನಲ್ಲಿದ್ದ. ಹೊರಗೆ ಅವನ ಅಸಿಸ್ಟೆಂಟ್ ಇದ್ದ; ಬೇರೆ ಯಾರೂ ಇರಲಿಲ್ಲ.

"ಮಾಧು ಇದ್ದಾನೇನಪ್ಪ ?" ಅಂತ ಕೇಳಿದೆ.

"ಡಾಕ್ಟರ್ ಮಾಧವರಾವ್ ಒಳಗಿದ್ದಾರೆ ಸ್ವಲ್ಪ ಕೂತಿರಿ" ಅಂದ. ಕೂತೆ. ಒಂದು ಹಳೇ ವಿಕಟ ವಿನೋದಿನಿ ಇತ್ತು. ಕೈಗೆತ್ತಿಕೊಂಡು ಓದ್ತಾ ಕೂತೆ.

ಒಂದು ಹೆಣ್ಣು ಮಗಳು ಒಂದು ಕೂಸನ್ನೆತ್ತಿಕೊಂಡು ಬಂದ್ಲು.

"ಒಳಗ್ಹೋಗೀಮಾ—ಡಾಕ್ಟರ್ ನೋಡ್ತಾರೆ"— ಅಂದ ಅಸಿಸ್ಟೆಂಟ್.

ಆ ಹೆಣ್ಣು ಮಗಳು ಮಗೂನ ಒಳಕ್ಕೆ ಕರ್ಕೊಂಡು ಹೋದ್ಲು. ಮಾಧು ಮಗೂಗೆ ಒಂದು ಇಂಜೆಕ್ಷನ್ ಕೊಟ್ಟ ಹಾಗಾಯ್ತು. ಕಿರ್‌ಚ್ತಾ ಇದ್ದ ಮಗೂನ ಎತ್ತಿಕೊಂಡು ಆ ಹೆಣ್ಣು ಮಗಳು ಹೊರಕ್ಕೆ ಬಂದು—ಹೊರಟೂ ಹೋದ್ಲು.

"ನೀವು ಹೋಗಿಸರ್–ಡಾಕ್ಟರ್‌ನ ನೋಡಿ" ಅಂದ ಅಸಿಸ್ಟೆಂಟ್. ನನಗೆ ರೇಗಿತ್ತು.

"ಏನಯ್ಯಾ. ನಾನು ಆವಾಗ್ಲಿಂದ ಕಾದಿದ್ದೇನೆ–ನಾನಾದ ಮೇಲೆ ಬಂದ ಹೆಣ್ಣು ಮಗಳನ್ನನಂಗಿಂತಾ ಮೊದಲು ಏಕೆ ಕಳಿಸ್ದೆ ಡಾಕ್ಟರ್ ಹತ್ರ ? ಅಂತ ಕೇಳಿದೆ.

"ಡಾಕ್ಟರ್ ಕಾದಿದ್ದಾರೆಸರ್–ಹೋಗಿ" ಅಂದ. ಕೂಲಾಗಿ ಮಾಧು ಒಳಗೆ ಕುಕ್ಕರ್ ಬಡಿದಿದ್ದ.

"ನೋಡಯ್ಯ, ನಿನ್ನ ಅಸಿಸ್ಟೆಂಟ್ ಶುದ್ಧ ರೋಗು. ನಾನೇ ಫಸ್ಟ್ ಬಂದಿದ್ದು. ನನ್ನ ಕುಕ್ಕರ್ ಬಡಿಸ್ಬಿಟ್ಟು ಆ ಹೆಣ್ಣು ಮಗಳನ್ನ ಮೊದಲು ಕಳ್ಸಿದ್ದಾನೆ" ಅಂತ ಕಂಪ್ಲೇಟ್ ಮಾಡಿದೆ.

ಮಾಧುನಕ್ಕ-ಇಡಿಯಟ್ಟು

"ಪಾಂಡು, ನನ್ನ ಅಸಿಸ್ಟೆಂಟ್ ಒಂದು ಥರಾಕಣೋ. ಗುಡ್‌ಫೆಲೋ ಆದ್ರೆ ಸೂಪರ್ಸ್ಟಿಷಸ್, ಒಂದು ಸಿಸ್ಟಂ ಇಟ್ಕೊಂಡಿದ್ದಾನೆ-ಇಲ್ಲಿ ಬರೋರ ಮುಖ ನೋಡ್ತಾನೆ-ಇವರು ಕ್ಯಾಷೂ-ಇವ್ರು ಬಿಟ್ಟೀ ಗಿರಾಕಿ ಅಂತ ಲೆಕ್ಕಾ ಹಾಕ್ತಾನೆ. ಪ್ರಾಣ ಹೋಗ್ತಿದ್ರೂ ಬಿಟ್ಟೀ ಗಿರಾಕೀನ ಮೊದಲು ಕಳ್ಸೋದಿಲ್ಲ."

ಮಾಧು ಪುನಃ ನಕ್ಕ-ಹಯನಾ ಹಾಗೆ,

ನಾನೂ ನಕ್ಕೆ ಏನೂ ತೋಚದೆ-ಡಯನಾ ಹಾಗೆ.

ಇದಾದ ಮೇಲೆ ಕೆಲವು ತಿಂಗಳುಗಳು ಕಳೆದವು. ಐ.ಎಸ್. ಟಾಕೀಸ್‌ನಲ್ಲಿ ದೇವಾನಂದ್‌ನ ಒಂದು ಪಿಕ್ಚರ್ ಬಂದಿತ್ತು. ಹೆಸರು ನೆನಪಿನಲ್ಲಿಲ್ಲ. ಅದರಲ್ಲಿ ದೇವಾನಂದ್ ಒಂದು ಥರಾ ಚೌಕಳಿಗಳಿರೋ ಮಫ್ಲರ್ ಧರಿಸಿದ್ದ-ಕೆಂಪು ಹಳದಿ ಕಲರ್ ಇರಬೇಕು. ತುಂಬಾ ಚೆನ್ನಾಗಿತ್ತು. ಆ ಮಫ್ಲರ್ ಬಲದಿಂದ್ಲೇ ದೇವಾ ನಂದ್-ಹೀರೋಯಿನ್ ಮಾಲಾಸಿನ್ಹಾನೋ-ನೂತನ್ನೋ ಇರಬೇಕು-ಅವಳ ಪ್ರೇಮಾನ ಸಂಪಾದಿಸಿದಹಾಗಿತ್ತು. ನಂಗೂ ಆ ಥರಾ ಮಫ್ಲರ್ ಮೇಲೆ ಆಸೆಯಾಯ್ತು. ಮಂರು ಸಂಜೆ ಸಯ್ಯಾಜಿರಾವ್ ರಸ್ತೇಲಿರೋ ಒಂದು ಷೋರೂಮಿಗೆ ನುಗ್ಗಿ ದೇವಾ ನಂದ್ ಮಫ್ಲರ್ ತಲಾಷ್ ಮಾಡಿದೆ. ಒಂದೇ ಒಂದು ಸಿಗ್ತು. ಅದನ್ನ ಕುತ್ತಿಗೆಗೆ ಸುತ್ತಿಕೊಂಡು ಮಿರರ್ ಮುಂದೆ ನಿಂತೆ....

"ನಿಮ್ಮ ಮುಖಕ್ಕೆ ಇದು ಒಪ್ಪೊಲ್ಲಸರ್" ಅಂತು ಒಂದು ಧ್ವನಿ.

ತಿರುಗಿನೋಡಿದೆ.

ಅದೇ ಆಸಾಮಿ-ಮಾಧು ಅಸಿಸ್ಟೆಂಟ್-ಹಾರಿಬಲ್ ಚ್ಯಾಪು !

"ನಮಸ್ಕಾರಸರ್-ಜ್ಞಾಪ್ಕ ಇದೆಯೆ ?" ಅಂದ.

"ಇಲ್ದೆ ಇರುತ್ಯೇಪ್ಪಾ ?" ಅಂದೆ ಮುಗುಮ್ಮಾಗಿ.

"ಈ ಮಫ್ಲರ್ ನಿಮಗೊಪ್ಪೊಲ್ಲಸರ್" ಅಂದ.

"ಯಾಕಪ್ಪ ? ದೇವಾನಂದ್‌ಗೆ ಅಷ್ಟು ಚೆನ್ನಾಗಿ ಒಪ್ಪುತ್ತೆ ?" ಅಂದೆ.

"ಹೌದುಸರ್—ದೇವಾನಂದ್ ಪರ್ಸನಾಲ್ಟಿ ಬೇರೆ-ನಿಮ್ಮ ಪರ್ಸನಾಲ್ಟಿ ಬೇರೆ ಸರ್. ಬ್ಲೂ ಅಂಡ್ ವೈಟ್ ಕಲರ್ ಸೆಲೆಕ್ಟ್ ಮಾಡಿಸರ್" ಅನ್ನುತ್ತಾ ತಾನೇ ಹುಡುಕಿ ಒಂದು ಬ್ಲೂ ಅಂಡ್ ವೈಟ್ ಮಫ್ಲರ್ ತೆಗೆದುಕೊಟ್ಟ.

ಮಫ್ಲರ್‌ನ ಕುತ್ತಿಗೆಗೆ ಸುತ್ತಿಕೊಂಡು ಕನಡೀ ಮುಂದೆ ನಿಂತೆ. ಮಾಧ ಅಸಿಸ್ಟೆಂಟ್ ಹೇಳಿದ್ದು ನಿಜ. ಬ್ಲೂ ಆಂಡ್ ವೈಟ್ ಕಲರ್ ನನ್ನ ಮುಖಕ್ಕೆ ಹೇಳಿ ಮಾಡಿಸಿದ ಹಾಗಿತ್ತು.

"ತುಂಬಾ ಥ್ಯಾಂಕ್ಸ್‌ಪ್ಪ. ಮಾಧು—ಐ ಮೀನ್ ಡಾಕ್ಟರ್ ಮಾಧವ್‌ರಾವ್ ಹೇಗಿದ್ದಾರೆ?" ಅಂತ ಕೇಳಿದೆ.

"ಅವರು ಷಾಪ್ ಮುಚ್ಚೆ ಬಿಟ್ರು ಸರ್. ಸರ್ಕಾರಿ ನೌಕ್ರಿ ಸೇರಿ ಬಿಟ್ರು ಸರ್"

ನನಗೆ ಆಶ್ಚರ್ಯವಾಯ್ತು.

"ಯಾಕೆ—ಪ್ರಾಕ್ಟೀಸ್ ಚೆನ್ನಾಗಿರ್ಲಿಲ್ವೆ?"

"ಇತ್ತು ಸರ್, ಆದ್ರೆ ಮೈಸೂರು ತುಂಬಾ ಅವರಿಗೆ ಫ್ರೆಂಡ್ಸೂ, ರಿಲೇಟಿವ್ಸೂ ಸರ್. ಬಿಟ್ಟೀ ಸರ್ವಿಸ್ಸೇ ಹೆಚ್ಚಾಗೋಯ್ತು"—ಅಂತ ಹೇಳಿ ನಕ್ಕ ಡಯಾನಾಥರಾ

ನಾನೂ ನಕ್ಕೆ—ಹಯಾನಾ ಥರಾ.

"ಈಗ ನೀನೇನ್ಮಾಡ್ತಿದ್ದಿ?" ಅಂತ ಕೇಳಿದೆ.

ಈ ಒಂದು ಕ್ವಶ್ಚನ್ನು ನನ್ನ ಇಡೀ ಲೈಫ್‌ನೇ ಅಲೀನೇಟ್-ಕ್ಷಮ್ಸಿ-ಎಲಿವೇಟ್-ಐ ಮೀನ್—ಆಲ್ಟರ್ ಮಾಡುತ್ತೆ ಅಂತ ನಾನು ನೆನೆಸಿರಲಿಲ್ಲ. ಆ ಥರಾ ಡೌಟ್ ಬಂದಿದ್ರೆ ನಾನು ಆ ಕ್ವಶ್ಚನ್ನ ಕೇಳ್ತಾನೇ ಇರ್ಲಿಲ್ಲ.

"ಏನೂ ಮಾಡ್ತಾ ಇಲ್ಲ ಸರ್. ನಾನು ನಿಮ್ಹತ್ರಾನೇ ಬರೋಣ ಅಂತ ಇದ್ದೆ ಸರ್" ಅಂದ.

ನನಗೆ ಷಾಕ್ ಹೊಡೆದ ಹಾಗಾಯ್ತು.

"ಯಾಕಪ್ಪಾ?" ಅಂದೆ.

''ಡಾಕ್ಟರ್ ಹೇಳಿದ್ರು ಸರ್–ಅವರು ಹೊರಡೋಕೆ ಮುಂಚೆ. ತ್ರೀಮಂತ್ಸ್ ಸ್ಯಾಲ್ರಿ ಕೊಟ್ಟು ಬಿಟ್ಟು–ನನ್ನ ಫ್ರೆಂಡ್ ಪಾಂಡುರಂಗರಾಯರನ್ನ ನೋಡು, ನಿಂಗೆ ಹೆಲ್ಪ್ ಮಾಡ್ತಾರೆ–ಅಂದ್ರು ಸರ್''.

ನನ್ನ ಕುತೂಹಲ ಕೆರಳಿತು.

"ಪಾಂಡುರಂಗರಾವ್ ಅಂದ್ರೆ ನಾನೇ ಅಂತ ನಿಂಗ್ಹ್ಯಾಗೆ ಗೊತ್ತು?"

"ಡಾಕ್ಟರ್ ಅವತ್ತು ನಿಮ್ಮನ್ನ–ಕ್ಷಮಿಸಿ ಸರ್–'ಪಾಂಡೂ' ಅಂತ ಕರೆದರಲ್ಲ ಸರ್–ನಿಮ್ಮನ್ನ ನಾನು ನಿಮ್ಮ ಫ್ರೆಂಡ್ಸ್ ಜೊತೇಲಿ ರೇಸ್ ಕೋರ್ಸ್‌ನಲ್ಲೂ ನೋಡಿದ್ದೇನೆ ಸರ್".

ಮಾಧು ಅಸಿಸ್ಟೆಂಟ್ ನಿಜವಾಗಿ ಖದೀಮ !

"ಹಾಗಾದ್ರೆ ನೀನೂ ರೇಸಿಂಗ್ ಬರ್ಡ್ ಅನ್ನು!"

"ಇಲ್ಲ ಸರ್ ಸೀಸನ್‌ನಲ್ಲಿ ಟೋಟ್ ಕೌಂಟರ್‌ನಲ್ಲಿ ಕೆಲ್ಸ ಮಾಡ್ತೇನೆ ಸರ್. ಇದೇ ರೇಸಿಂಗ್ ಸೀಸನ್‌ನಲ್ಲಿ ಥರ್ಡ್ ಡೇ-ನೀವು ನಂಜನಗೂಡ್ ಪ್ಲೇಟ್‌ನಲ್ಲಿ ದಿಲ್ಲಗೀ ಮೇಲೆ ಬೆಟ್ ಮಾಡಿ ಕಳ್ಕೊಂಡ್ರಿ ಸರ್. ನಾನ ಡಾಕ್ಟರ್‌ಗೆ ಟಿಪ್ ಕೊಟ್ಟಿದ್ದೆ ಸರ್ ನೈಟೀಗರ್ಲ್‌ನ ಫಾಲೋ ಮಾಡಿ ಅಂತ. ಅದೇ ವಿನ್ ಮಾಡ್ತು ಸರ್" ಅಂದ.

ಈ ಆಸಾಮೀನ ಹೊರಗೆ ಬಿಟ್ಟಿರೋದು ಡೇಂಜರಸ್ಸು ಅಂತ ಮನದಟ್ಟಾಯ್ತು ಮಾರನೇ ದಿನ ಬೆಳಿಗ್ಯೆ ಮನೆಗೆ ಬರಹೇಳ್ದೆ.

"ಬರ್ತೇನೆ ಸರ್. ನಿಮ್ಮನೆ ನಂಗೂತ್ತು" ಅಂದ.

ಸದ್ಯ–ಪಬ್ಲಿಕ್ ಲೆಟ್ರೀನ್‌ಗೂ, ಷೇವಿಂಗ್ ಸೆಲೂನ್‌ಗೂ ಮಧ್ಯೆ ಇರೋ ಮನೆ ಅಂತ ಹೇಳ್ಲಿಲ್ಲ.

"ಆಯ್ತು–ನಿನ್ನ ಹೆಸರೇನು?" ಅಂತ ಕೇಳಿದೆ.

"ಶೌರಿ" ಅಂದ.

"ಶೌರಿ ವ್ವಾಟ್?"

"ಓನ್ಲೀ ಶೌರಿ ಪ್ಲೈನ್ ಸರ್" ಅಂದೆ.

ನನಗೊಬ್ಬ ಆಂಟಿದ್ದಾರೆ—ಅತ್ತೆ. ಅಂದರೆ ನನ್ನ ತಾಯಿಯ ಅಣ್ಣ ರಾಂಪುರದ ಭೀಮಣ್ಣೋರ ವೈಫು—ನಾಗತ್ತೆ ಅಂತ. ಅವರಿಗೆ ಜೀವನದಲ್ಲಿ ಒಂದೇ ಒಂದು ಗುರಿ ಉಳಿದಿರೋದು—ನನ್ನನ್ನ ಒಂದು ಹೆಣ್ಣಿಗೆ ಒಪ್ಪಿಸಿ ಬಿಡೋದು ಅಂತ! ಈ ಒಂದು ಪ್ರಾಜೆಕ್ಟ್‌ನಲ್ಲಿ ಇದೇ ನಮ್ಮ ನಾಗತ್ತೆ—ಮೈಸೂರು ಆಸುಪಾಸಿನಲ್ಲಿರೋ ಹೆಣ್ಣುಗಳ ಮುಂದೆಲ್ಲಾ ನನ್ನನ್ನ ಪೆರೇಡ್ ಮಾಡಿಸಿದ್ದಾರೆ—ಮಾಡಿದ್ದಾರೆ. ಎಲ್ಲಾ ಚಾಲೂಕು ಹೆಣ್ಣುಗಳು—ಯಾವ್ದೂ ಕ್ಲಿಕ್ ಆಗ್ಲಿಲ್ಲ. ಲೇಟೆಸ್ಟ್ ಹೆಣ್ಣು—ಮೇನಕ—ನೋ ನೋ-ಅದು ಆರು ತಿಂಗಳ ಹಿಂದೆ....ನಾಗತ್ತೆ ಜೊತೇಲೇ ಬಂದಿತ್ತು. ಅದೇ ಸಮಯಕ್ಕೆ ಸರಿಯಾಗಿ ನಮ್ಮ ಬಾಬು ತಮ್ಮ ಬಷೀರ್—ಬಂದು ಟಿಫಿನ್ ಕ್ಯಾರಿಯರ್ ನನ್ನ ಮುಂದಿಟ್ಟು-ಇದು ನಮ್ಮಣ್ಣ ಕೊಟ್ಟು ಕಳ್ಸಿದ. ಬಕ್ರಿದ್ ಬಿರಿಯಾನಿ-ಅಂತ ಹೇಳಿದ ಇಡಿಯಟ್ಟು-ಇರಲಿ....

ಈ ಲೇಟೆಸ್ಟ್ ಶಕುಂತಲಾ—ನಾಗತ್ತೆ ಫೇವರಿಟ್ಟು. ರಾಂಪುರದ್ದೇ ಪ್ರಾಡಕ್ಟು. ಆ ಹುಡುಗಿಯ ಫ್ರೇಮ್ ಹಾಕಿಸಿದ ಫೋಟೋ ಕೂಡ ಪೈಲಟ್ ಹಾರ್ಸ್ ಥರಾ ಮನೆಗೆ ಬಂದಿತ್ತು. ಅದನ್ನ ಹಾಲಿನಲ್ಲಿ ರೇಡಿಯೋ ಮೇಲಿಟ್ಟಿದ್ದೆ—ದೃಷ್ಟಿ ಪರಿಹಾರಕ್ಕೆ.

ಶೌರಿ ಬಂದ.

"ನಮಸ್ಕಾರ ಸರ್"

"ಬಾಪ್ಪಾ—ನಮಸ್ಕಾರ" ಅಂದೆ.

ಹಾಲಿನಲ್ಲಿ ರೇಡಿಯೋ ಮೇಲೆ ಅವನ ದೃಷ್ಟಿ ಹರೀತು. ಹತ್ತಿರ ಹೋಗಿ ನೋಡಿದ.

"ಸರ್...."

"ಏನಪ್ಪ ?"

"ಕ್ಷಮ್ಸಿ ಸರ್, ಇದು ರಾಂಪುರ ನರಸಿಂಹಯ್ಯ ನೋರ ಮಗಳು ಶಕುಂತಲಮ್ಮನ ಫೋಟೋ ಅಲ್ವೆ ಸರ್ ?" ಅಂತ ಕೇಳಿದ.

"ಹೌದಪ್ಪ–ಏಕೆ ?"

"ಏನಿಲ್ಲ ಸರ್...." ಅಂತ ಡಯಾನಾ ಥರಾ ನಕ್ಕ. ನಂಗ್ಯಾಕೋ ಅನುಮಾನವಾಯ್ತು.

"ನಿಂಗೆ ಅವರ ಫ್ಯಾಮಿಲಿ ಗೊತ್ತೇನು ?" ಅಂತ ಕೇಳಿದೆ.

"ನನ್ನ ಭಾವ–ಹೆಗ್ಗಡ ದೇವನ ಕೋಟೆ ಅಖಿಲಾಂಡಯ್ಯನಿಗೂ ನರಸಿಂಹಯ್ಯನೋರಿಗೂ ತುಂಬಾ ಸ್ನೇಹಸರ್.........ಸಾರ್........

"ರಾಗ ಎಳೆದ.

"ಏನು ಶೌರಿ ?"

"ರಾಂಪುರದ ನರಸಿಂಹಯ್ಯನೋರು ಅವರ ಡಾಟರ್‌ನ ನಿಮಗೆ ಪ್ರಪೋಸ್ ಮಾಡಿದ್ದಾರೆಯೆ ಸರ್?" ಅಂತ ಕೇಳಿದ.

ನನಗೆ ಇಕ್ಕಟ್ಟಿನ ಪರಿಸ್ಥಿತಿ. ಈ ಹೊಸಾ ಆಸಾಮಿಗೆ, ನನ್ನ ಪರ್ಸನಲ್ ಅಫೇರ್ಸ್‌ನ ಹೇಳ್ಬೇಕೋ-ಬೇಡ್ವೋ ? ಹೊಸಾ ಸೋಲ್ಜರು-ಮಿಲಿಟರಿ ಸೀಕ್ರೆಟ್ನೆಲ್ಲಾ ತಿಳ್ಕೊಂಡು ಸ್ಪೈ ಆಗಿ ಬಿಟ್ರೆ ?

"ಹಾಗೇನಿಲ್ಲ-ಆದ್ರೆ ಈ ಸಾಟರ್‌ಡೇ–ನರಸಿಂಹಯ್ಯನೋರು ಫ್ಯಾಮಿಲಿ ಸಮೇತ ಮೈಸೂರಿಗೆ ಬರ್ತಾರಂತೆ. ಈ ಕಡೆ ಬಂದ್ರೂ ಬರ್ಬೋದು ಅಂತ ಡೌಟು." ಅಂದೆ-ಗೇಟ್ ಮೇಲೆ ದೀಪ ಇಟ್ಟ ಹಾಗೆ.

ಶೌರಿ—ಡ್ಯೂಟಿಗೆ ರಿಪೋರ್ಟ್ ಮಾಡಿಕೊಂಡ.

ಮಧ್ಯಾಹ್ನ ಟೀ ಜೊತೆಗೆ ಬಿಸಿ ಬಿಸಿ ಪಕೋಡ ತಂದಿಟ್ಟ.

"ಎಲ್ಲೀದು ಶೌರಿ?" ಕೇಳಿದೆ.

"ನಾನೇ ಕರಿದೆ ಸರ್" ಅಂದೆ.

ನನಗೆ ಅಷ್ಟಾಗಿ ಪಕೋಡ, ಆಂಬೊಡೆ, ಬಜ್ಜಿ, ಉದ್ದಿನವಡೆ, ಸಮೂಸ—ಇವುಗಳಲ್ಲಿ ವ್ಯತ್ಯಾಸ ಗೊತ್ತಾಗೊಲ್ಲ. ಆದ್ರೆ ಆ ದಿನ ಶೌರಿ ಕರಿದ ಪಕೋಡ ತನ್ನ ಐಡೆಂಟಿಟಿ ಪಡಕೊಂಡಿತ್ತು. ಹಿಂದೆ ಅಕ್ಬರ್ ತನ್ನ ಹೊಸಾ ದರ್ಬಾರ್ ಹಾಲ್‌ನ ನೋಡಿ-ಮೆಚ್ಚಿ-"ಭೂಲೋಕದಲ್ಲಿ ಸ್ವರ್ಗ ಅನ್ನೋದಿದ್ರೆ–ಅದು ಇದೇ ! ಇದೇ !"

ಅಂತ ಅಂದಿದ್ದನಂತೆ. ಅದೇ ರೀತಿ ಈಗ ಶೌರಿ ಕರಿದ ಪಕೋಡಗಳ ರುಚಿ ನೋಡಿದ ಮೇಲೆ—"ಭೂಲೋಕದಲ್ಲಿ ಪಕೋಡ ಅನ್ನೋ ತಿಂಡಿ ಒಂದಿದ್ರೆ ಅದು ಇದೇ! ಇದೇ!" ಅಂತ ಅನ್ನಬೇಕೆನ್ನಿಸಿತು ಸುಮಾರು ನಲವತ್ತು ಪಕೋಡಾ ತಿಂದೆ.

"ರಾತ್ರಿ ಊಟಕ್ಕೆ ಪೂರಿ ಸಾಗು ಮಾಡ್ತೀನೆ ಸರ್" ಅಂದ.

ವೈಗಳ್ಳರ ಸಂಘದಿಂದ ಬಂದು ಊಟ ಮುಗಿಸಿ ರೇಡಿಯೋಲಿ ದೇವೇಂದ್ರಪ್ಪ ನೋರ ಬಾಯಿಂದ—ಮನುಜ ಶರೀರವಿದೇನು ಸುಖಾ ಹಾಡು ಕೇಳ್ತಾ ಕೂತಿದ್ದೆ.... ಶೌರಿ ಬೋರ್ನ್‌ವಿಟಾ ತಂದ.

"ಶೌರಿ...."

"ಸರ್...."

''ನೀನು ಶಕುಂತಲಮ್ಮನ್ನ ನೋಡಿದ್ದೀಯಾ?''

''ಯಾವ ಶಕುಂತಲಮ್ಮನೋರು ಸರ್?''

''ರಾಂಪುರದ ನರಸಿಂಹಯ್ಯನೋರ ಡಾಟರ್ರು....''

"ನೋಡಿದ್ದೀನಿ ಸರ್ ನಾನೇ ನಿಮಗೆ ಹೇಳ್ಬೇಕೊಂತ ಇದ್ದೆ ಸರ್—ಕ್ಷಮಿಸ್ಬೇಕು ಸರ್........"

"ಹೇಳು ಶೌರಿ—ಇದು ಸೀರಿಯಸ್ ಪ್ರಾಬ್ಲಮ್"

"ನೀವು ಶಕುಂತಲಮ್ಮನವರಿಗೆ ಸೂಟ್ ಆಗಲಾರಿರಿ ಸರ್" ಅಂತ ತಲೆ ಮೇಲೆ ಹೊಡೆದ ಹಾಗೆ ಹೇಳಿದ.

"ಏಕೆ? ನನ್ನಲ್ಲೇನು ಊನವಾಗಿದೆ?"

''ನಿಮ್ಮಲ್ಲೇನೂ ಊನವಿಲ್ಲ ಸರ್. ಅವರು ಕಾಲೇಜಿನಲ್ಲಿದ್ದಾಗ ಷಾಟ್‌ಪುಟ್ ಛಾಂಪಿಯನ್ನು ಸರ್''

''ವೆರಿಗುಡ್''

''ಡಿಬೇಟಿಂಗ್‌ನಲ್ಲಿ ಫಸ್ಟು ಸರ್''

''ವೆರಿಗುಡ್ ನನಗೊಬ್ಬ ಡಿಬೇಟರ್ ಜೊತೆ ಬೇಕಾಗಿತ್ತು''

"ಅವರು ಪ್ರಾಕ್ಟಿಕಲ್ ಜೋಕರ್ ಸರ್. ಒಂದು ಬಾರಿ ಕಾಲೇಜ್ ಪ್ರಿನ್ಸಿಪಾಲ್‌ಗೆ ಅವರ ವೈಫ್ ತರಹಾನೇ ಫೋನ್ ಮಾಡಿ ಅವರು ಮನೆಗೆ ಬರುವಾಗ ಸರಿಯಾಗಿ ನಲವತ್ತೈದು ನುಗ್ಗೇಕಾಯಿಗಳನ್ನ ಕೊಂಡು ಬರುವ ಹಾಗೆ ಮಾಡಿದ್ರು ಸರ್"

"ಒಳ್ಳೇ ಸೆನ್ಸ್ ಆಫ್ ಹ್ಯೂಮರ್ ಶೌರಿ"

"ಒಂದು ಬಾರಿ ಅವರು.........."

"ಶೌರಿ—ಯು ಮೇ ಗೋ" ಅಂದೆ.

"ಸರಿ ಸರ್" ಅನ್ನುತ್ತಾ ಶೌರಿ ಖಾಲಿ ಲೋಟ ತಕೊಂಡು ಒಳಗೆ ಹೋದ.

ಶನಿವಾರ ಸುಮಾರು ಮ್ಯಾಟ್ನಿ ಶುರುವಾಗೋ ಹೊತ್ತಿಗೆ ಮನೆ ಮುಂದೆ ಟಾಂಗಾ ನಿಂತಿತು. ಒಬ್ಬ ಧಡೂತಿ ಆಕೆ, ಒಬ್ಬ ಧಡೂತಿ ಆತ, ಒಂದು ಜಾಕೀ ತರಹ ಹೆಣ್ಣು ಇಳಿದರು.

"ರಾಂಪುರದ ನರಸಿಂಹಯ್ಯನೋರ ಪಾರ್ಟಿ ಸರ್" ಅಂದ ಶೌರಿ. ಪಾರ್ಟಿ ಒಳಕ್ಕೆ ಮನೆಯೊಳಗೆ ಬಂದರು.

"ನಮಸ್ಕಾರ ಬನ್ನಿ" ಅಂದೆ. ಬಂದು ಕೂತರು. ನರಸಿಂಹಯ್ಯ ಶೌರೀನ ಗುರುತು ಹಿಡಿದರು.

"ನೀನು ಹೆಗ್ಗಡದೇವನ ಕೋಟೆ ಅಖಿಲಾಂಡಯ್ಯನ ಬ್ರದರಿನ್‌ಲಾ ಅಲ್ವೇನಪ್ಪಾ?" ಅಂತ ಕೇಳಿದರು.

"ಹೌದುಸರ್" ಅಂದ

ನರಸಿಂಹಯ್ಯ, ಅವರಾಕೆ ಮತ್ತು ಅವರ ಜಾಕಿಗರ್ಲ್ ಒಟ್ಟಿಗೆ ಮಾತನಾಡಲು ಶುರುಮಾಡಿದರು. ಅವರೇನು ತಮ್ಮೊಳಗೇ ಮಾತನಾಡಿಕೊಂಡರೋ ನನ್ನ ತ್ರಾನೂ ಮಾತನಾಡಿದರೋ-ಅಥವಾ ಏನು ಮಾತಾಡಿದರೋ ನಂಗೊಂದೂ ಗೊತ್ತಾಗ್ಲಿಲ್ಲ. ನಾನು ಸುಮ್ನೆ ಸ್ಮೈಲ್ ಮಾಡ್ತಾ ಕೂತಿದ್ದೆ-ಡಯೂನಾ ಥರಾ.

"ಪೊಸ್ಟ್!" ಅಂತ ಪೊಸ್ಟ್‌ಮನ್ ಕೂಗಿದ

"ನೀವು ಕೂರಿ ಸರ್-ನಾನು ಅಟೆಂಡ್ ಮಾಡ್ತೀನಿ"-ಅಂತ ಶೌರಿ ಹೋದ.

"ಪೋಸ್ಟ್ ಅಟೆಂಡ್ ಮಾಡಿಬಿಟ್ಟು ಬನ್ನಿ ಮಿಸ್ಟರ್ ಪಾಂಡು-" ಅಂದಳು ದಿಟ್ಟತನದಿಂದ ಜಾಕಿಗರ್ಲ್.

ನಾನು ಎದ್ದೆ

"ಟೀಸರ್" ಅನ್ನುತ್ತಾ ಟ್ರೇತಂದಿಟ್ಟ.

"ಪೋಸ್ಟ್‌ನಲ್ಲೇನಿಲ್ಲ-ಇನ್ಷೂರೆನ್ಸ್ ಕಂಪನೀ ಕಾಗ್ದ ಸರ್" ಅಂದ. ಮೂರು ಸೆಟ್–ವಾಂಗಿಭಾತ್–ಪಕೋಡಾ–ಟೀ–ಸರ್ವ್‌ಮಾಡಿದ. ವಾಂಗಿಭಾತ್–ಪಕೋಡ ಏಒನ್. ಟೀ ಸಿಪ್ ಮಾಡಿದೆ.

"ಶೌರೀ!!" ಅಂತಕೂಗಿದೆ

"ಸರ್......"

''ಟೀಗೆ ಸಕ್ರೀನೇ ಹಾಕಿಲ್ಲ" ಅಂದೆ

ನರಿಸಿಂಹಯ್ಯ ಟೀ ಸಿಪ್‌ಮಾಡಿದರು

''ಸಕ್ರೆ ಸಾಕು" ಅಂದರು

''ನಿಮ್ಮ ಕಪ್‌ಗೆ ಮಾತ್ರ ಸಕ್ರೆ ಹಾಕಿಲ್ಲ ಸರ್. ಡಾಕ್ಟರು ಅಡ್ವೈಸ್ ಮಾಡಿದಾರಲ್ಲಾ ಸರ್" ಅಂದ ಶೌರಿ

''ವ್ಹಾಟ್!" ಅಂತ ನರಸಿಂಹಯ್ಯ ಚೇಳುಕುಟುಕಿದವರಂತೆ ಎಗರಿದರು.

"ಅಪ್ಪ !'' ಅನ್ನುತಾ ಗರ್ಲ್‌ಎದ್ದು ನಿಂತಳು.

ಅವಳ ಕೈಲಿದ್ದ ಟೀ ಕಪ್ ಕೆಳಗೆ ಬಿತ್ತು.

"ಮಿಸ್ಟರ್ ಪಾಂಡುರಂಗರಾವ್-ತುಂಬಾಥ್ಯಾಂಕ್ಸ್ ನಾವು ನಿಮ್ಮ ಅಂಕಲ್ ಮತ್ತು ಆಂಟ್ ಹತ್ತಿರ ಮಾತಾಡ್ತೇವೆ ನಮಸ್ಕಾರ"-ಅನ್ನುತ್ತಾ ಹೊರಟೇಬಿಟ್ರು.

"ಶೌರೀ-ಯು ಆರ್ ಡಿಸ್‌ಮಿಸ್ಡ್-ಈ ಕ್ಷಣ ಇಲ್ಲಿಂದ ಹೊರಟ್ಹೋಗು!'' ಅಂತ ಕೂಗಿಕೊಂಡೆ.

ಶೌರಿಯ ಸುಳುವೇ ಇಲ್ಲ

"ಶೌರೀ!" ಅಂತ ಕಿರುಚಿದೆ

"ಕ್ಷಮಿಸ್ಸಿಸರ್-ಪೋಸ್ಟ್‌ನಲ್ಲಿ ಬಂದಿದ್ದ ಪಾರ್ಸಲ್ ಬಿಚ್ಚಿ ಇದ್ದೆ-ತಕೊಳ್ಳಿಸರ್" ಅಂತ ತೆರೆದ ಪಾರ್ಸಲ್ ತೋರಿಸಿದ—ಚೇಳು!

"ಏನಿದು?" ಅಂತ ಕೇಳಿದೆ

"ನಿಮಗೆ ಬಂದಿದ್ದ ಪಾರ್ಸಲ್ಲು ಸರ್"

"ಯಾರು ನಂಗೆ ಚೇಳುಕಳಿಸೋರು?"

"ಪ್ರಾಯಶಃ ಪೋಸ್ಟ್ ಬಂದ ತಕ್ಷಣ ನೀವೇ ಬಿಚ್ಚಿದ್ದರೆ-ಚೇಳುನೋಡಿದ ತಕ್ಷಣ ನಿಮ್ಮ ರಿಯಾಕ್ಷನ್ ಹ್ಯಾಗಿರುತ್ತೆ ಅಂತ ನೋಡೋಕೆ ಶಕುಂತಲಮ್ಮ ಕಳ್ಸಿರ ಬಹುದು ಸರ್"

ಶೌರಿಯು ಮಾತು ಕೇಳಿ ನಾನು ಅವಾಕ್ಕಾದೆ.

"ಛೆ-ಇಂಪಾಸಿಬಲ್!" ಅಂದೆ

"ನಿಮಗಾಗ್ಲೇ ಹೇಳೋಣಾಂತಿದ್ದೆ ಸರ್-ಒಂದು ಬಾರಿ ಶಕುಂತಲಮ್ಮ ಅವರ ತಮ್ಮ ಇಬ್ರೂ ಡಾಕ್ಟರ್ ಷಾಪಿಗೆ ಬಂದಿದ್ರು. ಅದೇ ಹೊತ್ತಿನಲ್ಲಿ ಡಾಕ್ಟರಿಗೆ ಒಂದು ಪೋಸ್ಟ್ ಪಾರ್ಸಲ್ ಬಂತು. ಡಾಕ್ಟರು ಸ್ವತಃ ಬಿಚ್ಚಿದರು ಸರ್. ಒಂದು ಕಪ್ಪೆ ಫ್ಲಕ್ ಹಾರಿತು ಸರ್. ಅಕ್ಕ ತಮ್ಮ ಇಬ್ರೂ ಚಪ್ಪಾಳೆ ತಟ್ಟಿಕೊಂಡು ಜೋಕ್‌ನಎಂಜಾಯ್ ಮಾಡಿದ್ರು ಸರ್. ಶಕುಂತಲಮ್ಮ ಹೇಳೇಬಿಟ್ರು ಸರ್-ರಿಸೀವರ್ ರಿಯಾಕ್ಷನ್ ಸ್ಟಡೀ ಮಾಡೋಕೆ ಅವರು ಈ ರೀತಿ ಪಾರ್ಸಲ್ ಕಳ್ಸಿ ಅದು ತಲ್ಪೋಸಮಯದಲ್ಲಿ ಅಲ್ಲಿ ಹಾಜರಾಗ್ತಾರಂತೆ."

"ಶೌರೀ-ಎನಫ್! ಛೆ! ಇಂಥಾಗಲ್ಸ್ ಫ್ಯೂಚರ್‌ನಲ್ಲಿ ಏನೇನು ಮಾಡಬಲ್ರು ಶೌರಿ?"

"ಪಾಲಿಟಿಕ್ಸ್ ಸೇರ್ತಾರೆ ಸರ್. ಮಿನಿಸ್ಟ್ರು-ಪ್ರೈಮ್ ಮಿನಿಸ್ಟ್ರು ಆಗಬಹುದು ಸರ್-ನಾನು ಹೊರಡ್ತೀನೆ ಸರ್"

"ಎಲ್ಲಿಗೆ"

"ನೀವು ಇದೇ ತಾನೇ ನನ್ನ ಡಿಸ್‌ಮಿಸ್ ಮಾಡಿದರಲ್ಲಾ ಸರ್"

"ಛೆ! ನನಗೆ ಜ್ಞಾಪಕವೇ ಇಲ್ಲ. ನೀನು ವರಾಂಡಾ, ರೂಮ್ ಇಟ್ಕೊ-ಮಲಕೋ ಸ್ವಲ್ಪ ಬೇಕಾದ್ರೆ"

"ಮಧ್ಯಾಹ್ನ ನಿದ್ರೆ ಮಾಡೋ ಅಭ್ಯಾಸವಿಲ್ಲ ಸರ್-ನಿಮ್ಹತ್ರ ಪೋಡ್‌ಹೌಸ್ ಇದೆಯಲ್ಲಾ ಸರ್-ಓದ್ತಾ ಇರ್ತೀನಿ ಸರ್'' ಅಂದ

''ಸರಿ ಶೌರಿ" ಅಂದೆ.

ಶೌರಿ ಕಂಟಿನ್ಯೂಸ್



''ಸದ್ಯ, ಊಟ ಮಾಡೋ ತಾಪತ್ರಯನೇ ಇಲ್ಲ ಮಾತ್ರೆ, ಗುಳಿಗೇಲೇ ಹೊಟ್ಟೆ ತುಂಬಿ ಹೋಗುತ್ತೆ''

No. 23 AL 4-NT III